14 May 2026 Thursday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಅದೃಷ್ಟವನ್ನು ನಂಬಿ ಕೈಕಟ್ಟಿ ಕುಳಿತರೆ ಜೀವನ ಸಾಗದು, ಪ್ರಯತ್ನಪಟ್ಟರೆ ಮಾತ್ರ ಜೀವನ ಸೊಗಸು!

-ಸ್ನೇಹಾ ಆನಂದ್

info.varthaman@gmail.com


2028ಕ್ಕೆ 58 ಕ್ಷೇತ್ರಗಳಲ್ಲಿ ಜೆಡಿಎಸ್ ಗೆಲುವು ನಿಶ್ಚಿತ — ಪುಟ ಸಂ. 2


ಬಿಜೆಪಿ ನಿಜವಾದ ಸ್ತ್ರೀ ಮೀಸಲಾತಿ ವಿರೋಧಿ: ಎಸ್.ನಾರಾಯಣ್ ಕಿಡಿ — ಪುಟ ಸಂ. 3


ಯಾದವಗಿರಿ ಗೂಡ್ಸ್ ಟರ್ಮಿನಲ್ ರಸ್ತೆ ಸಂಚಾರಕ್ಕೆ ಮುಕ್ತ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 170 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಸದನದಲ್ಲಿ 'ವಿಜಯ ಪತಾಕೆ'

## ಎಐಎಡಿಎಂಕೆ ಬಂಡಾಯ ಬಣ ಬೆಂಬಲ । 144 ಶಾಸಕರ ವಿಶ್ವಾಸ ಮತ

**ಚೆನ್ನೈ:** ತಮಿಳುನಾಡು ಮುಖ್ಯಮಂತ್ರಿ ವಿಜಯ್ ವಿಶ್ವಾಸ ಮತ ಅಗ್ನಿಪರೀಕ್ಷೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ್ದಾರೆ. ವಿಜಯ್ ಸರ್ಕಾರಕ್ಕೆ 144 ಶಾಸಕರ ಬೆಂಬಲ ದೊರೆತಿದೆ.

ವಿಧಾನಸಭೆಯಲ್ಲಿ ಬುಧವಾರ ನಡೆದ ವಿಶ್ವಾಸಮತಯಾಚನೆ ವೇಳೆ ನಿರೀಕ್ಷೆಗೂ ಮೀರಿ 144 ಶಾಸಕರ ಬೆಂಬಲದೊಂದಿಗೆ ತಮಿಳಗ ವೆಟ್ರಿ ಕಳಗಂ ಪಕ್ಷ ಬಹುಮತ ಸಾಬೀತುಪಡಿಸಿದೆ.

ಮತ್ತೊಂದೆಡೆ ಟಿವಿಕೆ ಬೆಂಬಲಿಸುವ ಮೂಲಕ ಎಐಎಡಿಎಂಕೆ ಛಿದ್ರಗೊಂಡಿದೆ. ಟಿವಿಕೆ, ಕಾಂಗ್ರೆಸ್, ಸಿಪಿಎಂ, ಸಿಪಿಐ, ಮುಸ್ಲಿಮ್ ಲೀಗ್, ವಿಸಿಕೆ ಜೊತೆ ಎಐಎಡಿಎಂಕೆಯ ಬಂಡಾಯ ಎದ್ದಿರುವ 27 ಶಾಸಕರು ವಿಜಯ್ ಸರ್ಕಾರಕ್ಕೆ ಬೆಂಬಲ ನೀಡಿದ್ದಾರೆ.

ವಿಧಾನಸಭೆ ಕಲಾಪ ಬುಧವಾರ ಆರಂಭವಾಗುತ್ತಿದ್ದಂತೆಯೇ ಮುಖ್ಯಮಂತ್ರಿ ಜೋಸೆಫ್ ವಿಜಯ್ ವಿಶ್ವಾಸ ಮತ ಯಾಚನೆಗೆ ನಿರ್ಣಯ ಮಂಡಿಸಿದರು. ವಿಶ್ವಾಸ ಮತ ಯಾಚನೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಮತ್ತು ಸಿಪಿಎಂ, ವಿಸಿಕೆ ಟಿವಿಕೆ ಸರ್ಕಾರಕ್ಕೆ ಬೆಂಬಲ ಘೋಷಿಸಿದವು. ಇದರಿಂದಾಗಿ ಟಿವಿಕೆಗೆ ಸದನದಲ್ಲಿ 120 ಶಾಸಕರ ಬಲವಿತ್ತು. ಮತ್ತೊಂದೆಡೆ ಎಐಎಡಿಎಂಕೆಯ 22 ಶಾಸಕರು ಟಿವಿಕೆ ವಿರುದ್ಧ ಮತ ಚಲಾಯಿಸಿದರು. ಐವರು ಶಾಸಕರು ಗೈರುಹಾಜರಾದರು.

ಕಾಂಗ್ರೆಸ್, ಸಿಪಿಐ, ಸಿಪಿಐ (ಎಂ) ಮತ್ತು ವಿಸಿಕೆ ಶಾಸಕರು ಪಕ್ಷಕ್ಕೆ ಬೆಂಬಲ ನೀಡಿದ್ದರಿಂದ ಟಿವಿಕೆ ಬಹುಮತ ಪರೀಕ್ಷೆಯಲ್ಲಿ ಗೆದ್ದಿತು. ಇಬ್ಬರು ಶಾಸಕರನ್ನು ಹೊಂದಿರುವ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಕೂಡ ಟಿವಿಕೆ ಸರ್ಕಾರಕ್ಕೆ ಬೆಂಬಲ ನೀಡಿದೆ. ಅಮ್ಮ ಮಕ್ಕಳ್ ಮುನ್ನೆತ್ರ ಕಜಗಂ ಉಚ್ಚಾಟಿತ ಶಾಸಕ ಕಾಮರಾಜ್ ಟಿವಿಕೆಯನ್ನು ಬೆಂಬಲಿಸಿದ್ದಾರೆ.





| ಸರ್ಕಾರದ ಪರ ಮತ | |
|---|---|
| ಟಿವಿಕೆ | 106 |
| ಕಾಂಗ್ರೆಸ್ | 5 |
| ಎಡಪಕ್ಷಗಳು | 4 |
| ವಿಸಿಕೆ | 2 |
| ಮುಸ್ಲಿಂ ಲೀಗ್ | 2 |
| ಎಐಎಡಿಎಂಕೆ | 27 |

### ಡಿಎಂಕೆ ಸಭಾತ್ಯಾಗ

ಅಚ್ಚರಿಯ ಬೆಳವಣಿಗೆಯಲ್ಲಿ ಡಿಎಂಕೆ ಸಭಾತ್ಯಾಗ ಮಾಡಿ, ಮತದಾನದ ಸಮಯದಲ್ಲಿ ಸದನದ ಒಟ್ಟು ಬಲವನ್ನು ಕಡಿಮೆ ಮಾಡಿತು. ಮಹತ್ವದ ಬೆಳವಣಿಗೆಯಲ್ಲಿ ಎಐಎಡಿಎಂಕೆ ಬಂಡಾಯ ಬಣ ಪಕ್ಷದ ವಿಪ್ ಉಲ್ಲಂಘಿಸಿ ವಿಜಯ್ ಪರವಾಗಿ ಮತ ಚಲಾಯಿಸಿತು. ಬಹುಮತ ಸಾಬೀತು ಪಡಿಸುವ ವೇಳೆ ಡಿಎಂಕೆ ಮತ್ತು ಪಿಎಂಕೆ ಶಾಸಕರು ಸಭಾತ್ಯಾಗ ಮಾಡಿದರು. ಒಬ್ಬ ಬಿಜೆಪಿ ಶಾಸಕರು ಮತದಾನದಿಂದ ದೂರ ಉಳಿದರು.

## ಆಮದು ಸುಂಕ ಏರಿಕೆ: ಚಿನ್ನದ ಬೆಲೆ ಗಗನಮುಖಿ



**ಮುಂಬೈ:** ಕೇಂದ್ರ ಸರ್ಕಾರ ಚಿನ್ನ ಮತ್ತು ಬೆಳ್ಳಿ ಮೇಲಿನ ಆಮದು ಸುಂಕವನ್ನು ಏರಿಕೆ ಮಾಡಿದ ಬೆನ್ನಲ್ಲೇ ಎಂಸಿಎಕ್ಸ್‌ನಲ್ಲಿ ಫ್ಯೂಚರ್ ಚಿನ್ನ, ಬೆಳ್ಳಿ ದರ ಭಾರೀ ಏರಿಕೆಯಾಗಿದೆ.

ಬುಧವಾರ ಬೆಳಗ್ಗೆ 9:45ರ ವೇಳೆಗೆ 10 ಗ್ರಾಂ ಚಿನ್ನದ ಬೆಲೆ 8,838 ರೂ. (ಶೇ.5.66) ಏರಿಕೆಯಾಗಿ 1,61,887 ರೂ.ನಲ್ಲಿ ವ್ಯವಹಾರ ನಡೆಯಿತು. 1 ಕೆಜಿ ಬೆಳ್ಳಿ ದರ 18,0920 ರೂ. (6.36) ಏರಿಕೆಯಾಗಿ 2,98,400 ರೂ.ಗೆ ಹೆಚ್ಚಳ ಕಂಡಿದೆ.

ಇಲ್ಲಿ ಚಿನ್ನವನ್ನು ಭೌತಿಕವಾಗಿ ಖರೀದಿಸದೇ ಭವಿಷ್ಯದ ದಿನಾಂಕ ನಿಗದಿತ ಬೆಲೆಯಲ್ಲಿ ಚಿನ್ನವನ್ನು ಖರೀದಿಸಲು ಅಥವಾ ಮಾರಾಟ ನಡೆಯುತ್ತದೆ.

## ಕೇರಳ ಸಿಎಂ ಆಯ್ಕೆ ನಂತರ ರಾಜ್ಯದತ್ತ ಗಮನ: ಜಾರಕಿಹೊಳಿ

**ಬೆಂಗಳೂರು:** ಕೇರಳದಲ್ಲಿ ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಂಗ್ರೆಸ್ ಹೈಕಮಾಂಡ್ ಶೀಘ್ರದಲ್ಲೇ ರಾಜ್ಯದತ್ತ ಗಮನ ಹರಿಸಲಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.



ಪುಟ 2ಕ್ಕೆ

## ಮಿತವ್ಯಯಕ್ಕೆ ಮೋದಿ ಆದೇಶ

### ವಿಶೇಷ ಭದ್ರತಾ ಪಡೆ ಬೆಂಗಾವಲು ವಾಹನ ಶೇ.50 ಇಳಿಕೆ

**ನವದೆಹಲಿ:** ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ದೇಶದಲ್ಲಿ ಇಂಧನ ಉಳಿತಾಯಕ್ಕೆ ಪ್ರಧಾನಿ ನರೇಂದ್ರ ಮೋದಿ ಮಹತ್ವದ ತೀರ್ಮಾನ ಕೈಗೊಂಡಿದ್ದಾರೆ. ವಿಶೇಷ ಭದ್ರತಾ ಪಡೆ ಬಳಸುವ ಅಧಿಕೃತ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಶೇ.50ರಷ್ಟು ಕಡಿತಗೊಳಿಸಲು ಸೂಚನೆ ನೀಡಿದ್ದಾರೆ.

ಪ್ರಧಾನಿ ಭದ್ರತೆಗಾಗಿ ಬಳಸುವ ಕೆಲವು ವಿಶೇಷ ಬೆಂಗಾವಲು ವಾಹನಗಳಲ್ಲಿ ಎಲೆಕ್ಟ್ರಿಕ್ ಕಾರುಗಳ ಬಳಕೆಗೆ ಸಹ ಅನುಮತಿ ನೀಡಲಾಗಿದೆ. ಇಂಧನ ಬಳಕೆಯನ್ನು ಕಡಿಮೆ ಮಾಡುವ ಜೊತೆಗೆ ಪರಿಸರ ಸ್ನೇಹಿ ಕ್ರಮಗಳಿಗೂ ಸರ್ಕಾರ ಒತ್ತು ನೀಡುತ್ತಿದೆ.

ಮಿತವ್ಯಯ ಕ್ರಮಗಳ ಭಾಗವಾಗಿ ನಡೆದ ಗುಹಾವಾಟಿ ಹಾಗೂ ವಡೋದರಾ ಭೇಟಿಗಳಲ್ಲೂ ಕಡಿಮೆ ವಾಹನಗಳಲ್ಲಿಯೇ ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆ ಜಾರಿಗೊಳಿಸಲಾಗಿತ್ತು. ಈ ಮೂಲಕ ಕೇವಲ ಸಾರ್ವಜನಿಕರಿಗೆ ಮಾತ್ರವಲ್ಲ, ಸರ್ಕಾರವೂ ಮಿತವ್ಯಯ ಕ್ರಮಗಳನ್ನು ಅನುಸರಿಸುತ್ತಿದೆ ಎಂಬ ಸಂದೇಶವನ್ನು ಪ್ರಧಾನಿ ನೀಡಿದ್ದಾರೆ.

ಕೇಂದ್ರ ಸರ್ಕಾರದ ಕಾರ್ಯಯೋಜನೆಯಲ್ಲಿ ನಾಗರಿಕರಿಗೆ ಎಲೆಕ್ಟ್ರಿಕ್ ವಾಹನಗಳ ಹೆಚ್ಚುವರಿ ಬಳಕೆ, ಅನಗತ್ಯ ಇಂಧನ ಬಳಕೆ ಕಡಿತ ಹಾಗೂ ಅಗತ್ಯವಿಲ್ಲದ ಪ್ರಯಾಣಗಳನ್ನು ತಪ್ಪಿಸುವಂತೆ ಕರೆ ನೀಡಲಾಗಿದೆ. ಪಶ್ಚಿಮ ಏಷ್ಯಾದ ಅಸ್ಥಿರತೆಯಿಂದ ಉಂಟಾದ ಜಾಗತಿಕ ಆರ್ಥಿಕ ಒತ್ತಡಗಳಿಗೆ ಪ್ರತಿಕ್ರಿಯೆಯಾಗಿ ಈ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಲಾಗಿದೆ.

ಆಡಳಿತದ ಕಾರ್ಯಕ್ಷಮತೆ ಮತ್ತು ಭದ್ರತಾ ಮಾನದಂಡಗಳನ್ನು ಕಾಪಾಡಿಕೊಂಡೇ ಸರ್ಕಾರಗಳು ಹಾಗೂ ಜನಪ್ರತಿನಿಧಿಗಳು ಪ್ರಾಯೋಗಿಕ ಮಿತವ್ಯಯ ಕ್ರಮಗಳನ್ನು ಅನುಸರಿಸಬೇಕು ಎಂಬುದು ಪ್ರಧಾನಿ ಮೋದಿ ಆಶಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.





# ಬೆಂಗಳೂರಿಗೆ ಭರ್ಜರಿ ಗಿಫ್ಟ್

## ಎ ಖಾತೆ ಶುಲ್ಕ ಶೇ.5ರಿಂದ 2ಕ್ಕೆ ಇಳಿಕೆ । ಡಿಸಿಎಂ ಡಿ.ಕೆ.ಶಿವಕುಮಾರ್ ಘೋಷಣೆ

**ಬೆಂಗಳೂರು:** ಬೆಂಗಳೂರಿನ ಜನತೆಗೆ ರಾಜ್ಯ ಸರ್ಕಾರ ಬುಧವಾರ ಆರನೇ ಗ್ಯಾರಂಟಿ ಘೋಷಿಸಿದೆ. ಬಿ ಖಾತಾದಿಂದ ಎ ಖಾತಾಗೆ ಆಸ್ತಿ ಪರಿವರ್ತನೆ ಮಾಡಿಕೊಳ್ಳುವುದಕ್ಕೆ ಆಸ್ತಿ ಮೇಲಿನ ಗೈಡ್‌ಲೈನ್ಸ್ ವ್ಯಾಲ್ಯೂ ಅನ್ನು ಶೇ.5ರಿಂದ ಶೇ.2ಕ್ಕೆ ಇಳಿಕೆ ಮಾಡಿದೆ.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು, ರಾಜ್ಯ ಸರ್ಕಾರ ಬಿ ಖಾತಾವನ್ನು ಎ ಖಾತಾ ಆಗಿ ಪರಿವರ್ತಿಸಲು 100 ದಿನಗಳ ಸುವರ್ಣ ಅವಕಾಶವನ್ನು ನೀಡುತ್ತಿದೆ. ಅಲ್ಲದೆ ಆಸ್ತಿ ಮೇಲಿನ ಗೈಡ್‌ಲೈನ್ಸ್ ವ್ಯಾಲ್ಯೂ ಅನ್ನು ಶೇಕಡಾ 5ರ ಬದಲಿಗೆ ಶೇಕಡಾ 2ಕ್ಕೆ ಇಳಿಸಿದೆ. ಇದರಿಂದ ಜನರಿಗೆ ಒಟ್ಟು ಶೇಕಡಾ 60ರಷ್ಟು ರಿಯಾಯಿತಿ ಸಿಗಲಿದೆ ಎಂದು ತಿಳಿಸಿದರು.

ನಗರದ ಇತಿಹಾಸದಲ್ಲಿ ಇದೇ ಮೊದಲ ಪುಟ 2ಕ್ಕೆ




### ನಮ್ಮ ಖಾತೆ, ನಮ್ಮ ಹಕ್ಕು

ಬೆಂಗಳೂರಿನ 23 ಲಕ್ಷ ಆಸ್ತಿ ಮಾಲೀಕರಿಗೆ ಅವರ ಮನೆ ಬಾಗಿಲಲ್ಲೇ ಆಸ್ತಿ ಹಕ್ಕುಗಳನ್ನು ಪಡೆಯಲು ನಮ್ಮ ಖಾತೆ, ನಮ್ಮ ಹಕ್ಕು ಅಭಿಯಾನವನ್ನು ಪ್ರಾರಂಭಿಸಲಾಗಿದೆ ಪುಟ 2ಕ್ಕೆ

### ಕಟ್ಟಡ ಉಲ್ಲಂಘನೆ: ಶೇ.15ಕ್ಕೆ ಹೆಚ್ಚಳ

ಬೆಂಗಳೂರಿನ ಬಹುತೇಕ ಕಟ್ಟಡ ಮಾಲೀಕರಿಗೆ ತಲೆನೋವಾಗಿದ್ದ ಸ್ವಾಧೀನಾನುಭವ ಪ್ರಮಾಣ ಪತ್ರ (ಒಸಿ) ಸಮಸ್ಯೆಗೆ ಸರ್ಕಾರ ಇತಿಶ್ರೀ ಹಾಡಿದೆ. ಈ ಹಿಂದೆ ಕಟ್ಟಡ ನಿರ್ಮಾಣದಲ್ಲಿ (ನಡುಜಾಗ, ಕವರೇಜ್ ಇತ್ಯಾದಿ) ಕೇವಲ ಶೇ.5ರಷ್ಟು ಉಲ್ಲಂಘನೆಗೆ ಮಾತ್ರ ದಂಡ ವಿಧಿಸಿ ಒಸಿ (ಒಸಿ) ನೀಡಲಾಗುತ್ತಿತ್ತು. ಆದರೆ, ಬಹುತೇಕ ಕಟ್ಟಡಗಳು ಶೇ.5ಕ್ಕಿಂತ ಹೆಚ್ಚು ಉಲ್ಲಂಘನೆ ಮಾಡಿದ್ದವು. ಡಿಸೆಂಬರ್ 17, 2024ರ ಸುಪ್ರೀಂಕೋರ್ಟ್ ಆದೇಶದಂತೆ ಒಸಿ ಇಲ್ಲದ ಕಟ್ಟಡಗಳಿಗೆ ವಿದ್ಯುತ್ ಮತ್ತು ನೀರಿನ ಸಂಪರ್ಕ ನೀಡುವುದನ್ನು ನಿಷೇಧಿಸಲಾಗಿತ್ತು. ಇದರಿಂದ ಲಕ್ಷಾಂತರ ಪುಟ 2ಕ್ಕೆ

# ಹೃದಯಾಘಾತದಿಂದ ನಟ, ನಿರ್ದೇಶಕ ದಿಲೀಪ್ ನಿಧನ

**ಬೆಂಗಳೂರು:** ಖ್ಯಾತ ನಟ, ನಿರ್ದೇಶಕ ಮತ್ತು ನಿರ್ಮಾಪಕ ದಿಲೀಪ್ ರಾಜ್ (47) ಬುಧವಾರ ಬೆಳಗಿನ ಜಾವ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಹಿಟ್ಲರ್ ಕಲ್ಯಾಣ ಸೀರಿಯಲ್ ಮೂಲಕ ದಿಲೀಪ್ ರಾಜ್ ಕಿರುತೆರೆಗೆ ಕಂಬ್ಯಾಕ್ ಮಾಡಿದ್ದರು. ಆ ಪಾತ್ರಕ್ಕೆ ವೀಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಸಿಕ್ಕಿತ್ತು. ಸಿನಿಮಾ ಮತ್ತು ಟಿವಿ ಎರಡರಲ್ಲೂ ನಟ, ನಿರ್ಮಾಪಕ ದಿಲೀಪ್ ರಾಜ್ ಗುರುತಿಸಿಕೊಂಡಿದ್ದರು. 2005ರಲ್ಲಿ ಬಿಡುಗಡೆಯಾದ ಬಾಯ್‌ಫ್ರೆಂಡ್ ಸಿನಿಮಾದಲ್ಲಿ ನಾಯಕನಾಗಿ ನಟಿಸುವ ಮೂಲಕ ಸಿನಿಮಾಗೆ ಎಂಟ್ರಿ ಕೊಟ್ಟಿದ್ದರು. ಮಿಲನ ಸಿನಿಮಾದಲ್ಲಿ ವಿಲನ್ ಪಾತ್ರದ ಮೂಲಕ ಹೆಸರು ಪಡೆದಿದ್ದರು.



ಸುಗ್ರೀವ, ಗೆಳೆಯ, ಯೂಟರ್ನ್, ಸೇರಿದಂತೆ 28 ಚಿತ್ರಗಳಲ್ಲಿ ದಿಲೀಪ್ ರಾಜ್ ನಟಿಸಿದ್ದಾರೆ. ಸದ್ಯ ಜನಪ್ರಿಯ ಧಾರಾವಾಹಿ ಕೃಷ್ಣ ರುಕ್ಕು ಪ್ರೊಡ್ಯೂಸ್ ಮಾಡುತ್ತಿದ್ದರು. 47 ವರ್ಷದ ದಿಲೀಪ್ ರಾಜ್ ಕೊನೆಯದಾಗಿ 'ಲವ್ ಮಾಕ್ಟೇಲ್ 3' ಸಿನಿಮಾದಲ್ಲಿ ನಟಿಸಿದ್ದರು. ಅಲ್ಲದೇ ಮನೆಯೊಂದು ಮೂರು ಬಾಗಿಲು, ರಥ ಸಪ್ತಮಿ, ಪ್ರೀತಿಗಾಗಿ ಧಾರಾವಾಹಿಗಳಲ್ಲೂ ನಟಿಸಿದ್ದರು.

ಇಂದು ಬೆಳಗಿನ ಜಾವ ದಿಲೀಪ್ ರಾಜ್‌ಗೆ ಹೃದಯಾಘಾತವಾಗಿದೆ. ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಿದರೂ ಕೂಡ ಚಿಕಿತ್ಸೆಗೆ ಸ್ಪಂದಿಸದೇ ದಿಲೀಪ್ ರಾಜ್ ಕೊನೆಯುಸಿರೆಳೆದಿದ್ದಾರೆ. ದಿಲೀಪ್ ನಿಧನಕ್ಕೆ ಕನ್ನಡ ಚಿತ್ರಂಗದ ಗಣ್ಯರು ಕಂಬನಿ ಮಿಡಿದಿದ್ದಾರೆ.

## ನಂದಿಗ್ರಾಮ ಕ್ಷೇತ್ರಕ್ಕೆ ಸುವೇಂದು ರಾಜೀನಾಮೆ


**ಕೋಲ್ಕತ್ತಾ:** ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಭದ್ರಕೋಟೆ ಭಬಾನಿಪುರ ಕ್ಷೇತ್ರವನ್ನು ಉಳಿಸಿಕೊಳ್ಳುವುದಾಗಿ ಬುಧವಾರ ಘೋಷಿಸಿದ್ದಾರೆ. ನಂದಿಗ್ರಾಮಕ್ಕೆ ರಾಜೀನಾಮೆ ನೀಡಿದ್ದಾರೆ.

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಸುವೇಂದು ಅಧಿಕಾರಿ ಅವರು ಭಬಾನಿಪುರದಲ್ಲಿ ಮಮತಾ ಬ್ಯಾನರ್ಜಿ ವಿರುದ್ಧ ಹಾಗೂ ತಮ್ಮ ಸ್ವಕ್ಷೇತ್ರ ನಂದಿಗ್ರಾಮದಲ್ಲಿ ಟಿಎಂಸಿ ಅಭ್ಯರ್ಥಿ ವಿರುದ್ಧ ಭರ್ಜರಿ ಗೆಲುವು ಸಾಧಿಸಿದ್ದರು. ಈಗ ಒಂದು ಕಡೆ ರಾಜೀನಾಮೆ ನೀಡಿದ್ದು, ಭವಾನಿಪುರವನ್ನು ಉಳಿಸಿಕೊಂಡಿದ್ದಾರೆ.

## ಬಿಜೆಪಿ ಗೆಲುವಿಗೆ ತಿರುಚಿದ ಅಂಚೆ ಪತ್ರ ಕಾರಣ: ರಾಜೇಗೌಡ

**ಬೆಂಗಳೂರು:** ಶೃಂಗೇರಿ ವಿಧಾನಸಭೆ ಕ್ಷೇತ್ರದಲ್ಲಿ ಬಿಜೆಪಿ ಗೆಲುವಿಗೆ ನಕಲಿ ಹಾಗೂ ತಿರುಚಿದ ಅಂಚೆ ಪತ್ರಗಳು ಕಾರಣ ಎಂದು ಶಾಸಕ ಡಿ.ಟಿ.ರಾಜೇಗೌಡ ಆರೋಪಿಸಿದರು.

ಶೃಂಗೇರಿ ಕ್ಷೇತ್ರದ ಅಂಚೆ ಮತ ಎಣಿಕೆಯ ಫಲಿತಾಂಶವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿ ಚುನಾಯಿತ ಪ್ರತಿನಿಧಿಯಾಗಿ ಅವರನ್ನು ಮರುನೇಮಕಗೊಳಿಸಿದ ನಂತರ ಮಾತನಾಡಿದ ಅವರು, ಈ ಹೋರಾಟದಲ್ಲಿ ಬಿಜೆಪಿ ಸ್ಥಾನ ಕಳೆದುಕೊಳ್ಳುವ ಸಾಧ್ಯತೆ ಹೆಚ್ಚಿತ್ತು. ನಕಲಿ ದಾಖಲೆ, ಅಂಚೆ ಮತಪತ್ರಗಳನ್ನು ತಿರುಚಲಾಗಿತ್ತು ಎಂದು ದೂರಿದರು.



ನ್ಯಾಯಾಲಯವು ಅನೇಕ ಸುಳ್ಳುಗಳನ್ನು ಹಾಗೂ ನನ್ನ ವಿರೋಧಿಗಳು ಹೇರಿದ ಸುಮಾರು 18 ಆರೋಪಗಳನ್ನು ತಿರಸ್ಕರಿಸಿದೆ ಎಂದು ರಾಜೇಗೌಡ ತಿಳಿಸಿದರು.

## ಟಿವಿಕೆ ಶಾಸಕರಿಗೆ 'ಸುಪ್ರೀಂ'ನಲ್ಲಿ ಗೆಲುವು

**ಚೆನ್ನೈ:** ತಮಿಳುನಾಡು ವಿಧಾನಸಭೆಯಲ್ಲಿ ಬಹುಮತ ಸಾಬೀತು ವೇಳೆ ಹಾಜರಾಗದಂತೆ ಟಿವಿಕೆ ಶಾಸಕ ಆರ್.ಶ್ರೀನಿವಾಸ ಸೇತುಪತಿ ಅವರನ್ನು ತಡೆದಿದ್ದ ಮದ್ರಾಸ್ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ಬುಧವಾರ ತಡೆ ನೀಡಿದೆ.

ಈ ಸಂಬಂಧ ಸೇತುಪತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ವಿಜಯ್ ಬಿಷ್ಣೋಯ್ ಅವರನ್ನೊಳಗೊಂಡ ನ್ಯಾಯಪೀಠ, ಕನಿಷ್ಠವಾಗಿ ಹೇಳುವುದಾದರೆ ಇದು ಅಮಾನವೀಯ ನಡೆಯಾಗಿದೆ. ಚುನಾವಣಾ ಅರ್ಜಿಯೇ ಪರಿಹಾರ ಎಂದು ಹೈಕೋರ್ಟ್ ಹೇಳುತ್ತದೆ. ಆದರೆ ಆರ್ಟಿಕಲ್ 226ರ ಅರ್ಜಿಯನ್ನು ಇನ್ನೂ ಪರಿಗಣಿಸುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿತು.

ಸಂವಿಧಾನದ 226 ನೇ ವಿಧಿಯು ಕೆಲವು ರಿಟ್‌ಗಳನ್ನು ಹೊರಡಿಸಲು ಹೈಕೋರ್ಟ್ ಅಧಿಕಾರದ ಬಗ್ಗೆ ವ್ಯವಹರಿಸುತ್ತದೆ. ಈ ವಿಷಯದಲ್ಲಿ ಹೈಕೋರ್ಟ್‌ನಲ್ಲಿ ಬಾಕಿ ಇರುವ ವಿಚಾರಣೆಯನ್ನು ಸಹ ಪೀಠ ತಡೆಹಿಡಿದಿದೆ. ಡಿಎಂಕೆ ನಾಯಕ ಪೆರಿಯಕರುಪ್ಪನ್ ವಿರುದ್ಧ ಒಂದೇ ಮತದ ಅಂತರದಿಂದ ಸೇತುಪತಿ ಗೆದ್ದಿದ್ದರು.



## ಜಿಲೆಟಿನ್ ಪತ್ತೆ ಪ್ರಕರಣಕ್ಕೆ ಟ್ವಿಸ್ಟ್

**ಬೆಂಗಳೂರು:** ನಗರಕ್ಕೆ ಪ್ರಧಾನಿ ಮೋದಿ ಭೇಟಿ ನೀಡಿದ್ದ ಸಂದರ್ಭ ತಾತಗುಣಿ ಬಳಿ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿರುವ ಪ್ರಕರಣಕ್ಕೆ ಟ್ವಿಸ್ಟ್ ಸಿಕ್ಕಿದೆ. ಮೋದಿ ಬೆಂಗಳೂರಿಗೆ ಭೇಟಿ ನೀಡುವ ಕೇವಲ ಒಂದು ದಿನದ (ಮೇ 9) ಮೊದಲು ಶಂಕಿತ ಆರೋಪಿ ಲೋಹಿತ್ ತಮಿಳುನಾಡಿಗೆ ಹೋಗಿ ಬಂದಿರುವುದು ಪತ್ತೆಯಾಗಿದೆ.

ಇದು ತನಿಖಾ ತಂಡಗಳಲ್ಲಿ ಹಲವು ಅನುಮಾನಗಳಿಗೆ ಕಾರಣವಾಗಿದೆ. ಪ್ರಕರಣದ ಹಿಂದೆ ಯಾವುದಾದರೂ ಉದ್ದೇಶಪೂರ್ವಕ ಸಂಚು ಅಡಗಿದೆಯೇ ಎಂಬ ನಿಟ್ಟಿನಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಬೆದರಿಕೆ ಕರೆ ಮಾಡಿದ್ದ ಲೋಹಿತ್ ಎಂಬಾತನನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗಿದೆ. ಆತನ ಟ್ರಾವೆಲ್ ಹಿಸ್ಟರಿ ಪರಿಶೀಲಿಸಿದಾಗ ಸ್ಫೋಟಕ ಮಾಹಿತಿ ಲಭ್ಯವಾಗಿದೆ. ತಮಿಳುನಾಡಿನಲ್ಲಿ ಜಿಲೆಟಿನ್ ತಯಾರಿಕಾ ಘಟಕಗಳು ಮತ್ತು ಮಾರಾಟಗಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಆತ ಅಲ್ಲಿಗೆ ಭೇಟಿ ನೀಡಿರುವುದು ಅನುಮಾನಕ್ಕೆ ಕಾರಣವಾಗಿದೆ. ಪ್ರಸ್ತುತ ತಮಿಳುನಾಡಿನ ಸ್ಫೋಟಕ ಮಾರಾಟಗಾರರ ಬಗ್ಗೆ ಪೊಲೀಸರು ಮಾಹಿತಿ ಕಲೆಹಾಕುತ್ತಿದ್ದಾರೆ.

# ನೀಟ್ ಪರೀಕ್ಷೆ ರದ್ದು: ಮೋದಿ ಹೊಣೆ

## ಪ್ರಧಾನಿ ದೇಶದ ಜನರಿಗೆ ಉತ್ತರಿಸಲಿ । ಮಧು ಬಂಗಾರಪ್ಪ ಆಗ್ರಹ

**ಬೆಂಗಳೂರು:** ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಲೀಕ್ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಉತ್ತರ ಕೊಡಬೇಕು ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಆಗ್ರಹಿಸಿದರು.

ವಿಧಾನಸೌಧದಲ್ಲಿ ಬುಧವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನೀಟ್ ಪರೀಕ್ಷೆ ಪೇಪರ್ ಲೀಕ್ ಆಗಿರುವುದು ದೊಡ್ಡ ದುರಂತ. ಮಕ್ಕಳು ಕಷ್ಟಪಟ್ಟು ಓದಿರುತ್ತಾರೆ. ಹೀಗೆ ಮಾಡೋದು ಬುಲ್ಡೋಜರ್ ಸಂಪ್ರದಾಯ. ಎನ್‌ಟಿಎ ಪರೀಕ್ಷೆ ಮಾಡಿದಾಗ 6 ಸಾರಿ ಪೇಪರ್ ಲೀಕ್ ಆಗಿದೆ. ಮೋದಿ ಪರೀಕ್ಷಾ ಪೇ ಚರ್ಚಾ ಮಾಡಿದ್ದನ್ನು ಖಂಡನೆ ಮಾಡಬೇಕು. ಈ ಪ್ರಕರಣದ ಜವಾಬ್ದಾರಿ ಮೋದಿಯೇ ಹೊರಬೇಕು ಎಂದು ಕಿಡಿಕಾರಿದರು.

ಈ ದೇಶದಲ್ಲಿ ಮೋದಿ ಸರ್ವಾಧಿಕಾರ ಆಡಳಿತ ತಂದಿದ್ದಾರೆ. ಹಣ ಇಲ್ಲ ಅಂತ ಉದ್ಯೋಗ ಖಾತ್ರಿ ಯೋಜನೆಯನ್ನು ಗಬ್ಬು ಎಬ್ಬಿಸಿದರು. ಮೋದಿ ಅವರು ಬೇರೆ ದೇಶಕ್ಕೆ ಹೋದಾಗ ಚಿನ್ನ ತಗೋಬೇಡಿ ಅಂತ ಹೇಳಿದ್ದಾರೆಯೇ? ಈಗ ಮೋದಿ ತಗೋಬೇಡ ಅಂತಾರೆ. ಇನ್ನು ಮುಂದೆ ಆದರೂ ನೀಟ್ ಎಕ್ಸಾಂ ಬಗ್ಗೆ ರಾಜ್ಯ ಸರ್ಕಾರದ ಜೊತೆ ಚರ್ಚೆ ಮಾಡಬೇಕು ಎಂದು ವಾಗ್ದಾಳಿ ನಡೆಸಿದರು.

ಎನ್‌ಟಿಎ ಎಕ್ಸಾಂ ಮಾಡಿ 300 ಕೋಟಿ ರೂ. ಲಾಭ ಮಾಡ್ತಾರೆ. ಮಕ್ಕಳು ದೇಶದ ಭವಿಷ್ಯ. ಪರೀಕ್ಷೆ ಸರಿಯಾಗಿ ಮಾಡಬೇಕು. ನಾವು ಪರೀಕ್ಷೆ ಮಾಡೋವಾಗ ಪ್ಲ್ಯಾನ್ ಎ, ಬಿ, ಸಿ ಅಂತ ಮಾಡ್ತೀವಿ. ಎನ್‌ಟಿಎಗೆ ಏನ್ ಯೋಗ್ಯತೆ ಇದೆ. ಇವರ ಈ ಕ್ರಮದಿಂದ ಮಕ್ಕಳ ಮೇಲೆ ಒತ್ತಡ ಉಂಟಾಗುತ್ತದೆ. ಏನೇ ಮಾಡಿದರೂ ಮಕ್ಕಳ ಹಿತದೃಷ್ಟಿಯಿಂದ ತೀರ್ಮಾನ ಮಾಡಬೇಕು. ಎಕ್ಸಾಂಗೆ ಒಂದು ಸಿಸ್ಟಮ್ ಇರುತ್ತದೆ. ಎನ್‌ಟಿಎಯನ್ನ ಕಸದ ಬುಟ್ಟಿಗೆ ಹಾಕಬೇಕು. ಶಿಕ್ಷಣ ಸಚಿವನಿಗೆ ತಲೆ ಇಲ್ಲ ಅಂತ ಪುಟ 2ಕ್ಕೆ



# ಶಾಲಾ-ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಸರ್ಕಾರದ ಅವಕಾಶ

**ಬೆಂಗಳೂರು:** ಶಾಲಾ-ಕಾಲೇಜುಗಳಲ್ಲಿ ಜನಿವಾರ ಮತ್ತು ಹಿಜಾಬ್ ಸೇರಿದಂತೆ ಧಾರ್ಮಿಕ ಪದ್ಧತಿಗೆ ಅನುಗುಣವಾದ ವಸ್ತ್ರ ಧರಿಸಲು ರಾಜ್ಯ ಸರ್ಕಾರ ಮಹತ್ವದ ಆದೇಶ ಹೊರಡಿಸಿದೆ.

ಸಮವಸ್ತ್ರ ವಿಚಾರವಾಗಿ 2022ರ ಆದೇಶ ಹಿಂಪಡೆದು ಹೊಸ ಆದೇಶ ಹೊರಡಿಸಲಾಗಿದೆ. ಸರ್ಕಾರದ ನಿರ್ದೇಶನಗಳಿಗೆ ಅನುಗುಣವಾಗಿ ಆದೇಶ ಹೊರಡಿಸಲಾಗಿದೆ. ಸಮವಸ್ತ್ರ ನಿಗದಿಪಡಿಸಿ ಕಡ್ಡಾಯಗೊಳಿಸುವುದನ್ನು ಮುಂದುವರೆಸಬಹುದು ಎಂದು ಹೇಳಲಾಗಿದೆ.

ಸಾಮಾನ್ಯವಾಗಿ ವಿದ್ಯಾರ್ಥಿಗಳು ಪುಟ 2ಕ್ಕೆ



## ಕಣ್ಣಿಗೆ ಕಾರದಪುಡಿ ಹಾಕಿ ದರೋಡೆ: ನಾಲ್ವರ ಬಂಧನ

**ಚಿಕ್ಕಬಳ್ಳಾಪುರ:** ವ್ಯಕ್ತಿಯೊಬ್ಬರ ಕಣ್ಣಿಗೆ ಮೆಣಸಿನ ಪುಡಿ ಎಸೆದು, ಮಚ್ಚಿನಿಂದ ಬೆದರಿಸಿ 7.5 ಲಕ್ಷ ದರೋಡೆ ಮಾಡಲಾಗಿದೆ. ನಾಲ್ವರು ವ್ಯಕ್ತಿಗಳನ್ನು ಬಂಧಿಸಲಾಗಿದೆ.

ಅಪರಾಧ ನಡೆದ ಕೇವಲ ಮೂರು ಗಂಟೆಗಳಲ್ಲಿ ಪ್ರಕರಣ ಬೇಧಿಸಲಾಗಿದೆ. ಬಂಧಿತ ಆರೋಪಿಗಳನ್ನು ಯಶವಂತ್, ದರ್ಶನ್, ಭರತ್ ಮತ್ತು ವಿಶಕಾಂತಮೂರ್ತಿ ಎಂದು ಗುರುತಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ದರೋಡೆ ಮಾಡಿದ್ದ 7.5 ಲಕ್ಷ, ಒಂದು ಕಾರು ಮತ್ತು ಅಪರಾಧಕ್ಕೆ ಬಳಸಲಾಗಿದೆ ಎನ್ನಲಾದ ಮೋಟಾರ್ ಬೈಕ್ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಕ್ರೀಡಾ ಸಂಸ್ಥೆಗಳ ನೋಂದಣಿಯಿಂದ ಮಾನ್ಯತೆ, ಪ್ರೋತ್ಸಾಹ

ಚಾಮರಾಜನಗರ: ಜಿಲ್ಲೆಯ ಕ್ರೀಡಾ ಸಂಸ್ಥೆಗಳು ಕ್ರೀಡಾ ಪ್ರಾಧಿಕಾರದ ನಿಯಮಗಳ ಅಡಿಯಲ್ಲಿ ನೋಂದಣಿಯಾಗುವ ಮೂಲಕ ರಾಜ್ಯಮಟ್ಟದ ಮಾನ್ಯತೆ ಪಡೆದುಕೊಳ್ಳಬೇಕು. ಇದರಿಂದ ಕ್ರೀಡಾ ಚಟುವಟಿಕೆಗಳಿಗೆ ಸರ್ಕಾರದ ನೆರವು ಮತ್ತು ತಾಂತ್ರಿಕ ಸಹಕಾರ ಲಭ್ಯವಾಗಲಿದೆ ಎಂದು ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷರಾದ ಸಿ.ಎಸ್. ಅರುಣ್ ಮಾಚಯ್ಯ ತಿಳಿಸಿದರು. ನಗರದ ಜಿಲ್ಲಾಡಳಿತ ಭವನದ ಕೆಡಿಪಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಕ್ರೀಡಾ ಸಂಸ್ಥೆಗಳ ಪದಾಧಿಕಾರಿಗಳ ಸಮಾಲೋಚನಾ ಸಭೆಯಲ್ಲಿ ಅವರು ಕ್ರೀಡಾ ಕ್ಷೇತ್ರದ ಅಭಿವೃದ್ಧಿ ಕುರಿತು ಮಾತನಾಡಿದರು.



### ಕ್ರೀಡಾ ಸಂಸ್ಥೆಗಳ ಬಲವರ್ಧನೆ, ಮಾನ್ಯತೆ

ರಾಜ್ಯದ ಮೂಲೆ ಮೂಲೆಗಳಲ್ಲಿ ಕ್ರೀಡೆಯನ್ನು ಉತ್ತೇಜಿಸುವ ಸಲುವಾಗಿ ಕ್ರೀಡಾ ಪ್ರಾಧಿಕಾರವು ಸಕ್ರಿಯವಾಗಿ ಕೆಲಸ ಮಾಡುತ್ತಿದ್ದು, ಈಗಾಗಲೇ 22 ಜಿಲ್ಲೆಗಳಿಗೆ ಭೇಟಿ ನೀಡಿ ಕ್ರೀಡಾ ಸೌಲಭ್ಯಗಳ ಪರಿಶೀಲನೆ ನಡೆಸಲಾಗಿದೆ. ಜಿಲ್ಲಾ ಮಟ್ಟದ ಕ್ರೀಡಾ ಅಸೋಸಿಯೇಷನ್ಗಳು ಅಧಿಕೃತವಾಗಿ ನೋಂದಣಿಯಾದಲ್ಲಿ ಮಾತ್ರ ಕ್ರೀಡಾ ಪ್ರಗತಿಗೆ ವೇಗ ಸಿಗಲು ಸಾಧ್ಯ. ಕ್ರೀಡಾ ಸಂಸ್ಥೆಗಳ ನೋಂದಣಿಯಿಂದ ಕ್ರೀಡಾಪಟುಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುವುದಲ್ಲದೆ, ಜಿಲ್ಲಾ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟಗಳ ಸಂಘಟನೆಗೆ ಅಗತ್ಯವಿರುವ ಎಲ್ಲ ರೀತಿಯ ಸಹಕಾರವನ್ನು ಪ್ರಾಧಿಕಾರದಿಂದ ನೀಡಲಾಗುವುದು ಎಂದು ಅವರು ಅಭಿಪ್ರಾಯಪಟ್ಟರು.

### ಗ್ರಾಮೀಣ ಪ್ರತಿಭೆಗಳಿಗೆ ವೇದಿಕೆ ಮತ್ತು ಸೌಲಭ್ಯಗಳ ನಿರ್ವಹಣೆ

ಕ್ರೀಡಾ ಕ್ಷೇತ್ರವು ಕೇವಲ ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗದೆ, ಗ್ರಾಮಾಂತರ ಭಾಗದ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಸರ್ಕಾರದ ಮುಖ್ಯ ಉದ್ದೇಶವಾಗಿದೆ. ಇದಕ್ಕಾಗಿ ಇತಿಹಾಸದಲ್ಲಿ ಮೊದಲ ಬಾರಿಗೆ ಗುಡ್ಡಗಾಡು ಪ್ರದೇಶದ ಜನರಿಗಾಗಿ ವಿಶೇಷ ಕ್ರೀಡಾಕೂಟಗಳನ್ನು ಆಯೋಜಿಸಲಾಗಿದೆ. ಚಾಮರಾಜನಗರ ಜಿಲ್ಲೆಯಂತಹ ಪ್ರದೇಶಗಳಲ್ಲಿ ಲಭ್ಯವಿರುವ ಕ್ರೀಡಾ ಮೂಲಸೌಕರ್ಯಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕಾದ ಅನಿವಾರ್ಯತೆಯಿದೆ. ಮೈದಾನಗಳು ಸುಸ್ಥಿತಿಯಲ್ಲಿದ್ದರೆ ಜಿಲ್ಲೆಗೆ ಆದಾಯವೂ ಬರುತ್ತದೆ ಮತ್ತು ಕ್ರೀಡಾಪಟುಗಳ ತರಬೇತಿಗೂ ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಸ್ಥಳೀಯ ಶಾಸಕರೊಂದಿಗೆ ಚರ್ಚಿಸಿ ಅಗತ್ಯ ಅನುದಾನ ಮತ್ತು ಅಭಿವೃದ್ಧಿ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.


### ಜಿಲ್ಲಾ ಕ್ರೀಡಾಂಗಣದ ಅಭಿವೃದ್ಧಿಗೆ ಕ್ರೀಡಾಪಟುಗಳ ಆಗ್ರಹ

ಸಭೆಯಲ್ಲಿ ಪಾಲ್ಗೊಂಡಿದ್ದ ಕ್ರೀಡಾ ಸಂಘಟನೆಗಳ ಮುಖಂಡರು ಮತ್ತು ಸಾಧಕರು ಜಿಲ್ಲೆಯ ಕ್ರೀಡಾ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತಂದರು. ಮುಖ್ಯವಾಗಿ ಜಿಲ್ಲಾ ಕೇಂದ್ರದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದ ಕಾಮಗಾರಿ ಕಳೆದ ಎರಡು ದಶಕಗಳಿಂದ ಕುಂಟುತ್ತಾ ಸಾಗುತ್ತಿದ್ದು, ಇದನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದರು. ಚಾಮರಾಜನಗರದಲ್ಲಿ ಕಬ್ಬಡ್ಡಿ, ಖೋ-ಖೋ, ಬಾಲ್ ಬ್ಯಾಡ್ಮಿಂಟನ್ ಹಾಗೂ ನೆಟ್ ಬಾಲ್ನಂತಹ ಕ್ರೀಡೆಗಳಿಗೆ ಹೆಚ್ಚಿನ ಆಸಕ್ತರಿದ್ದು, ಇವರಿಗೆ ಸೂಕ್ತ ತರಬೇತುದಾರರನ್ನು ನೇಮಿಸಬೇಕು ಎಂದು ಮನವಿ ಮಾಡಿದರು. ಜಿಲ್ಲೆಯ ಕ್ರೀಡಾ ಸಾಧಕರನ್ನು ರಾಜ್ಯಮಟ್ಟದ ಪ್ರಶಸ್ತಿಗಳಿಗೆ ಪರಿಗಣಿಸಬೇಕು ಹಾಗೂ ಅಗತ್ಯ ಅಂಕಣಗಳನ್ನು ನಿರ್ಮಿಸಿಕೊಡಬೇಕು ಎಂದು ಮುಖಂಡರು ಕೋರಿದರು.

### ಸ್ಥಳ ಪರಿಶೀಲನೆ ಮತ್ತು ಗಣ್ಯರ ಉಪಸ್ಥಿತಿ

ಸಭೆಗೂ ಮುನ್ನ ಅರುಣ್ ಮಾಚಯ್ಯ ಅವರು ಅಧಿಕಾರಿಗಳೊಂದಿಗೆ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣಕ್ಕೆ ಭೇಟಿ ನೀಡಿ ಸಿಂಥೆಟಿಕ್ ಟ್ರ್ಯಾಕ್ ಹಾಗೂ ಪೆವಿಲಿಯನ್ ಕಾಮಗಾರಿಗಳನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಕ್ರೀಡಾ ಇಲಾಖೆಯ ಪ್ರಭಾರ ಸಹಾಯಕ ನಿರ್ದೇಶಕಿ ಹೆಚ್. ಎಸ್. ಬಿಂದ್ಯಾ, ರಾಜ್ಯ ಕರಾಟೆ ಅಸೋಸಿಯೇಷನ್ ಅಧ್ಯಕ್ಷ ಸಿದ್ದರಾಜು ಹಾಗೂ ಜಿಲ್ಲೆಯ ವಿವಿಧ ಕ್ರೀಡಾ ಸಂಸ್ಥೆಗಳ ಪದಾಧಿಕಾರಿಗಳು ಮತ್ತು ಹಿರಿಯ ಕ್ರೀಡಾಪಟುಗಳು ಉಪಸ್ಥಿತರಿದ್ದು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

# ಮೇ14ರಂದು 33 ದಿನಗಳ ಮೈಸೂರು ದಿಗ್ವಿಜಯಕ್ಕೆ ಸ್ವಾಗತ



ಮೈಸೂರು: ಶ್ರೀ 1008 ಸತ್ಯಾತ್ಮತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯಕ್ಕೆ ಮೇ 14 ರಂದು ಸಂಜೆ 4.30ಕ್ಕೆ ನಗರದಲ್ಲಿ ಭವ್ಯ ಸ್ವಾಗತ ಆಯೋಜಿಸಲಾಗಿದೆ ಎಂದು ಉತ್ತರಾದಿ ಮಠದ ವ್ಯವಸ್ಥಾಪಕ ಅನಿರುದ್ಧಾಚಾರ್ಯ ಪಾಂಡುರಂಗಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಮೆರವಣಿ ಮಹಾರಾಜ ಕಾಲೇಜು ಮೈದಾನದಿಂದ ಆರಂಭವಾಗಿ ವಿವಿಧ ಕಲಾ ತಂಡಗಳೊಡನೆ ಉತ್ತರಾದಿ ಮಠಕ್ಕೆ ಪಲ್ಲಕ್ಕಿ ಸಮೇತ ಆಗಮಿಸಲಿದೆ. ಶಾಸಕ ಟಿ.ಎಸ್. ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್, ಶಾಸಕ ಹರೀಶ್‌ಗೌಡ, ಎನ್.ಎಂ. ನವೀನ್‌ಕುಮಾರ್, ಕೆ.ಆರ್. ಸತ್ಯನಾರಾಯಣ, ಡಿ.ಟಿ. ಪ್ರಕಾಶ್, ರಘುರಾಂ ವಾಜಪೇಯಿ, ಮಹೇಶ್ ಕಾಮತ್, ಎಸ್. ಭುಜಂಗ, ಅನಂತ್ ನಾಗರಾಜ್, ಎಸ್.ಬಿ. ವಾಸುದೇವಮೂರ್ತಿ ಇನ್ನಿತರರು ಹಾಜರಿರುವರು ಎಂದರು.

ಭವ್ಯ ಮೆರವಣಿಗೆಯಲ್ಲಿ ನಾದಸ್ವರ, ವೀರಗಾಸೆ ಕುಣಿತ, ಚಂಡೆ ನಗಾರಿ, ಡೊಳ್ಳು ಕುಣಿತ, ಬೊಂಬೆ ವೇಷ, ಕಂಸಾಳೆ, ಉಡುಪಿಯ ಬಾಣ ಬಿರುಸು, ಚೆನ್ನೈನ ಚಿತ್ತಾರದ ಆನೆ ಹಾಗೂ ವಿವಿಧ ಭಜನಾ ಮಂಡಳಿಗಳು ಪಾಲ್ಗೊಳ್ಳಲಿವೆ ಎಂದು ಮಾಹಿತಿ ನೀಡಿದರು. ಎನ್.ಎಂ. ನವೀನ್‌ಕುಮಾರ್, ಆರ್.ಎಸ್. ಸತ್ಯನಾರಾಯಣ, ರಘುವೀರ್ ಸಾಂಗ್ಲಿ, ಪ್ರವೀಣ್‌ಕುಮಾರ್ ಇದ್ದರು.

# ಬಿಜೆಪಿ ನಿಜವಾದ ಸ್ತ್ರೀ ಮೀಸಲಾತಿ ವಿರೋಧಿ

## ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಎಸ್.ನಾರಾಯಣ್ ಕಿಡಿ | ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ

ಚಾಮರಾಜನಗರದಲ್ಲಿ ನಡೆದ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಕಾರ್ಯಕಾರಿಣಿ ಸಭೆಯಲ್ಲಿ ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಎಸ್.ನಾರಾಯಣ್ ಅವರು ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ನಗರದ ಸತ್ತಿ ರಸ್ತೆಯಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಈ ಸಮಾರಂಭದಲ್ಲಿ ಬ್ಲಾಕ್ ಸಮಿತಿ ಪದಾಧಿಕಾರಿಗಳಿಗೆ ನೇಮಕಾತಿ ಆದೇಶ ಪತ್ರಗಳನ್ನು ವಿತರಿಸಿ ಮಾತನಾಡಿದ ಅವರು, ಮಹಿಳೆಯರ ಹಿತರಕ್ಷಣೆಯ ವಿಚಾರದಲ್ಲಿ ಬಿಜೆಪಿ ಕೇವಲ ರಾಜಕೀಯ ನಾಟಕವಾಡುತ್ತಿದೆ ಎಂದು ಆರೋಪಿಸಿದರು.



**ಮಹಿಳಾ ಮೀಸಲಾತಿ ವಿಚಾರದಲ್ಲಿ ಬಿಜೆಪಿಯ ದ್ವಂದ್ವ ನೀತಿ**

ಬಿಜೆಪಿ ಪಕ್ಷವು ಮಹಿಳಾ ಮೀಸಲಾತಿಯ ನಿಜವಾದ ವಿರೋಧಿಯಾಗಿದೆ ಎಂದು ಎಸ್.ನಾರಾಯಣ್ ಕಟುವಾಗಿ ಟೀಕಿಸಿದರು. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಕಾಂಗ್ರೆಸ್ ಪಕ್ಷವು ಸ್ವಾತಂತ್ರ್ಯ ಪೂರ್ವದಿಂದಲೂ ಮಹಿಳೆಯರ ಸಬಲೀಕರಣಕ್ಕೆ ಶ್ರಮಿಸುತ್ತಾ ಬಂದಿದೆ. ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳ ಮೂಲಕ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ. 33ರಷ್ಟು ಮೀಸಲಾತಿಯನ್ನು ಕಲ್ಪಿಸಿಕೊಟ್ಟಿದ್ದು ಕಾಂಗ್ರೆಸ್ ಸರ್ಕಾರದ ಐತಿಹಾಸಿಕ ಸಾಧನೆಯಾಗಿದೆ. ಆದರೆ ಇಂದು ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸದೆ ಜನರನ್ನು ದಾರಿ ತಪ್ಪಿಸುತ್ತಿದೆ. 2023ರಲ್ಲೇ 'ನಾರಿ ವಂದನ್' ಮಹಿಳಾ ಮೀಸಲಾತಿ ಜಾರಿಯಾಗಿದೆ ಎಂದು ಪ್ರಧಾನಿ ಮೋದಿ ಅವರು ಸಾಮಾಜಿಕ ಜಾಲತಾಣಗಳಲ್ಲಿ ಹೇಳಿಕೊಂಡಿದ್ದರು. ಈಗ 2026ರಲ್ಲಿ ಮತ್ತೊಮ್ಮೆ ಅದೇ ಕಾಯ್ದೆಯನ್ನು ಜಾರಿಗೊಳಿಸಲು ಮುಂದಾಗಿರುವ ಉದ್ದೇಶವೇನು ಎಂದು ಅವರು ಪ್ರಶ್ನಿಸಿದರು. ಐದು ರಾಜ್ಯಗಳ ಚುನಾವಣೆ ಇರುವ ಸಮಯದಲ್ಲಿ ತುರ್ತು ಅಧಿವೇಶನ ಕರೆದು ರಾಜಕೀಯ ಲಾಭಕ್ಕಾಗಿ ಮಹಿಳೆಯರ ಭಾವನೆಗಳೊಂದಿಗೆ ಆಟವಾಡಲಾಗುತ್ತಿದೆ ಎಂದು ಕಿಡಿಕಾರಿದರು. ಸಭೆಯಲ್ಲಿ ಕಾಂಗ್ರೆಸ್ ಪ್ರಚಾರ ಸಮಿತಿಯ ವಿವಿಧ ಪದಾಧಿಕಾರಿಗಳು ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಉಪಸ್ಥಿತರಿದ್ದು, ಪಕ್ಷ ಸಂಘಟನೆಯ ಕುರಿತು ಚರ್ಚಿಸಿದರು. ಕಾರ್ಯಕರ್ತರಲ್ಲಿ ಈ ಸಭೆಯು ಹೊಸ ಹುರುಪು ಮೂಡಿಸಿತು.

### ಸಾಮಾಜಿಕ ನ್ಯಾಯ ಮತ್ತು ಮುಂಬರುವ ಚುನಾವಣೆಗಳ ಸಿದ್ಧತೆ

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಕಾಂಗ್ರೆಸ್ ಪಕ್ಷವು ಎಲ್ಲ ಧರ್ಮ ಮತ್ತು ವರ್ಗದ ಜನರಿಗೆ ಸಾಮಾಜಿಕ ನ್ಯಾಯ ಒದಗಿಸುವ ಏಕೈಕ ಪಕ್ಷವಾಗಿದೆ. ಪ್ರಚಾರ ಸಮಿತಿಯ ಪದಾಧಿಕಾರಿಗಳಿಗೆ ತಮ್ಮ ಕ್ಷೇತ್ರದಲ್ಲಿ ಸಕಲ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಅವರು ಮಾತನಾಡಿ, ಮುಂಬರುವ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಜಯ ಭೇರಿ ಬಾರಿಸುವಂತೆ ಮಾಡಲು ಈಗಿನಿಂದಲೇ ಕಾರ್ಯಕರ್ತರು ಸಜ್ಜಾಗಬೇಕು ಎಂದು ಸೂಚಿಸಿದರು. ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಮಧುಸೂದನ್ ಅವರ ನೇತೃತ್ವದಲ್ಲಿ ಜಿಲ್ಲೆಯ ಎಲ್ಲ ಬ್ಲಾಕ್ಗಳಲ್ಲಿ ಸಮಿತಿಗಳನ್ನು ರಚಿಸಲಾಗಿದ್ದು, ಮುಂಬರುವ ದಿನಗಳಲ್ಲಿ ಪಕ್ಷದ ಗೆಲುವಿಗಾಗಿ ನಿರಂತರ ಹೋರಾಟ ಮಾಡುವುದಾಗಿ ಘೋಷಿಸಲಾಯಿತು.

### ಪ್ರಚಾರ ಸಮಿತಿಯು ಯುದ್ಧದ ಸೇನಾನಿಗಳಂತೆ ಕೆಲಸ ಮಾಡಬೇಕು

ಪಕ್ಷದ ಸಂಘಟನೆಯಲ್ಲಿ ಪ್ರಚಾರ ಸಮಿತಿಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಅಭಿಪ್ರಾಯಪಟ್ಟ ನಾರಾಯಣ್ ಅವರು, ಪದಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದರು. ಪ್ರಚಾರ ಸಮಿತಿ ಎಂದರೆ ಕೇವಲ ನೇಮಕಾತಿ ಪತ್ರ ಪಡೆದು, ವಿಸಿಟಿಂಗ್ ಕಾರ್ಡ್ಗಳನ್ನು ಇಟ್ಟುಕೊಂಡು, ಕಾರಿಗೆ ನಾಮಫಲಕ ಹಾಕಿಕೊಳ್ಳುವುದಕ್ಕೆ ಸೀಮಿತವಾಗಬಾರದು. ಬದಲಿಗೆ ಯುದ್ಧದ ಸೇನಾನಿಗಳಂತೆ ಕೆಲಸ ಮಾಡಿ ಪಕ್ಷವನ್ನು ತಳಮಟ್ಟದಿಂದ ಸದೃಢಗೊಳಿಸಬೇಕು. ಕಾಂಗ್ರೆಸ್ ಪಕ್ಷದ ಬಗ್ಗೆ ದೇಶಾದ್ಯಂತ ಅಪಪ್ರಚಾರ ಮಾಡಲಾಗುತ್ತಿದೆ, ಅದನ್ನು ಸಮರ್ಥವಾಗಿ ಎದುರಿಸಿ ಜನರಿಗೆ ಸತ್ಯವನ್ನು ಮುಟ್ಟಿಸುವುದು ಪ್ರಚಾರ ಸಮಿತಿಯ ಜವಾಬ್ದಾರಿಯಾಗಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಪ್ರಚಾರ ಸಮಿತಿಯು ಹಿಂದೆಂದಿಗಿಂತಲೂ ಹೆಚ್ಚು ಕ್ರಿಯಾಶೀಲವಾಗಿ ಕೆಲಸ ಮಾಡಬೇಕೆಂದು ಅವರು ಕರೆ ನೀಡಿದರು.

# ಒತ್ತುವರಿಯಾಗಿದ್ದ ಎಕರೆ ಜಾಗ ಎಂಡಿಎಯಿಂದ ತೆರವು



ಮೈಸೂರು: ಮೈಸೂರು ತಾಲ್ಲೂಕಿನ ನಾಚನಹಳ್ಳಿ ಗ್ರಾಮದ ಸರ್ವೇ ನಂಬರ್ 21ರಲ್ಲಿ ಇರುವ 8 ಎಕರೆ 2 ಗುಂಟೆ ಪ್ರದೇಶದ ಪೈಕಿ ಸುಮಾರು 1 ಎಕರೆ ಜಾಗವನ್ನು ಖಾಸಗಿ ವ್ಯಕ್ತಿಗಳು ಅತಿಕ್ರಮಣ ಮಾಡಿಕೊಂಡಿರುವುದು ಪತ್ತೆಯಾದ ಹಿನ್ನೆಲೆಯಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ತೆರವುಗೊಳಿಸಿದರು.

ಈ ಜಮೀನನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಪರಸ್ಪರ ಒಪ್ಪಂದದ ಆಧಾರದ ಮೇಲೆ ಭೂಸ್ವಾಧೀನ ಪಡಿಸಿಕೊಂಡು ಪರಿಹಾರವನ್ನು ಈಗಾಗಲೇ ಪಾವತಿಸಿತ್ತು. ಈ ಹಿನ್ನೆಲೆಯಲ್ಲಿ ಆಯುಕ್ತರ ಆದೇಶದಂತೆ ತೆರವು ಕಾರ್ಯಾಚರಣೆ ನಡೆಸಲಾಯಿತು. ಕಾರ್ಯಾಚರಣೆಯನ್ನು ಕಾ.ಅ.ಕೆ.ಆರ್.ಮಹೇಶ್, ಕಾ.ಅ ನೂತನ ಹಾಗೂ ವಿಶೇಷ ಭೂಸ್ವಾಧೀನ ಶಾಖೆಯ ಮಹದೇವಸ್ವಾಮಿ, ಸಚಿನ್ ಮತ್ತು ಕೆಂಪಣ್ಣ ನೇತೃತ್ವದಲ್ಲಿ ನಡೆಸಿ, ಅತಿಕ್ರಮಿತ ಜಾಗವನ್ನು ತೆರವುಗೊಳಿಸಿ ಪ್ರಾಧಿಕಾರದ ಸುಪರ್ದಿಗೆ ಪಡೆಯಲಾಯಿತು.

# ಜುಲೈ 11ರಂದು ರಾಷ್ಟ್ರೀಯ ಲೋಕ ಅದಾಲತ್

ರಾಮನಗರ: ಜಿಲ್ಲೆಯ ನ್ಯಾಯಾಲಯದಲ್ಲಿ ಬಾಕಿ ಇರುವ ಹಾಗೂ ರಾಜಿ ಆಗಬಹುದಾದ ಪ್ರಕರಣಗಳನ್ನು 2026ರ ಜುಲೈ 11ರಂದು ನಡೆಯಲಿರುವ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಇತ್ಯರ್ಥಗೊಳಿಸಿಕೊಳ್ಳುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಅಧ್ಯಕ್ಷರಾದ ನ್ಯಾ. ಎಂ.ಎಚ್. ಅಣ್ಣಯ್ಯನವರ ಅವರು ಕರೆ ನೀಡಿದ್ದಾರೆ.

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯಾದ್ಯಂತ ಜುಲೈ 11ರಂದು ರಾಷ್ಟ್ರೀಯ ಲೋಕ ಅದಾಲತ್ ಆಯೋಜಿಸಲಾಗಿದೆ. ಈ ಅದಾಲತ್‌ನಲ್ಲಿ ರಾಜಿ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅವಕಾಶವಿದೆ. ಸಾರ್ವಜನಿಕರು ಇದರ ಲಾಭ ಪಡೆದುಕೊಳ್ಳಬಹುದಾಗಿದೆ ಎಂದವರು ತಿಳಿಸಿದ್ದಾರೆ. ಜಿಲ್ಲೆಯಾದ್ಯಂತ ಏಕಕಾಲಕ್ಕೆ ಜುಲೈ 11 ರಂದು ನಡೆಯುವ ಲೋಕ ಅದಾಲತ್‌ಗಾಗಿ ಜುಲೈ 10ರವರೆಗೆ ಪ್ರಕರಣಗಳನ್ನು ನೋಂದಣಿ ಮಾಡಿಕೊಳ್ಳಲಾಗಿದೆ. ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆ ಹಾಗೂ ಅಧೀನ ನ್ಯಾಯಾಲಯಗಳಲ್ಲಿ ಕಲಾಪ ನಡೆಯಲಿದೆ. ನ್ಯಾಯಾಲಯದ ಕಲಾಪಗಳಲ್ಲಿ ವಕೀಲರು ಭಾಗವಹಿಸಬಹುದು, ಅವಶ್ಯಕತೆ ಇದ್ದಲ್ಲಿ ಕಕ್ಷಿದಾರರನ್ನು ಆನ್‌ಲೈನ್ ಮೂಲಕ ಸಂಪರ್ಕಿಸಲಾಗುವುದು.

ಜಿಲ್ಲೆಯಲ್ಲಿ ಒಟ್ಟು 59,507 ಪ್ರಕರಣಗಳು ಬಾಕಿ ಇದ್ದು, ಅವುಗಳ ಪೈಕಿ ರಾಜಿಯಾಗಬಹುದಾದ ಎಲ್ಲಾ ಪ್ರಕರಣಗಳನ್ನು ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ರಾಜಿ ಪ್ರಕರಣಗಳನ್ನಾಗಿ ಪರಿಗಣಿಸಿ ಕೈಗೆತ್ತಿಕೊಳ್ಳಲಾಗುತ್ತದೆ. ವಕೀಲರು ಖುದ್ದಾಗಿ ಹಾಗೂ ಆನ್‌ಲೈನ್ ಮೂಲಕ ಭಾಗವಹಿಸಲು ಅವಕಾಶ ಮಾಡಿಕೊಡಲಾಗಿದೆ. ಎಲ್ಲರಿಗೂ ನ್ಯಾಯ ದೊರಕಿಸಿ ಕೊಡುವ ಉದ್ದೇಶದಿಂದ ಲೋಕ ಅದಾಲತ್‌ಗೆ ಚಾಲನೆ ನೀಡಲಾಗಿದೆ.

# ಶಿಕ್ಷಣವೇ ಸಮಾಜದ ಪ್ರಗತಿಯ ಅಡಿಪಾಯ

ಮೈಸೂರು: ಶಿಕ್ಷಣವೇ ಸಮಾಜದ ಪ್ರಗತಿಯ ಅಡಿಪಾಯ, ಈಗಿನ ವಿದ್ಯಾರ್ಥಿಗಳ ಪ್ರತಿಭೆಯೇ ರಾಷ್ಟ್ರದ ಭವಿಷ್ಯದ ಶಕ್ತಿ ಎಂದು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯರಾದ ಡಾ.ಈ.ಸಿ.ನಿಂಗರಾಜ್ ಗೌಡ ತಿಳಿಸಿದರು.



ರೋಟರಿ ಮೈಸೂರು ಸೌತ್ ಈಸ್ಟ್ ಕ್ಲಬ್ ವತಿಯಿಂದ ಎಸ್‌ಎಸ್ ಎಲ್ ಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನೂ ಶಾರದದೇವಿನಗರದಲ್ಲಿ ಇರುವ ರೋಟರಿ ಎಸಿಎಂಇ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ ನೇರವೇರಿಸಿ ಮಾತನಾಡಿದರು. ವಿದ್ಯಾರ್ಥಿಗಳು ತಮ್ಮ ಪಠ್ಯದ ಜೊತೆಗೆ ನಿಮಗೆ ಇಷ್ಟವಾಗುವ ಕನಿಷ್ಠ ಇಬ್ಬರು ಮಹಾಪುರುಷರ ಜೀವನ ಚರಿತ್ರೆಯನ್ನು ಓದಬೇಕು. ಸ್ವಾಮಿ ವಿವೇಕಾನಂದ, ಸುಭಾಷ್ ಚಂದ್ರ ಬೋಷ್, ಮಹಾತ್ಮ ಗಾಂಧಿಜಿ, ಡಾ.ಬಿ.ಆರ್. ಅಂಬೇಡ್ಕರ್, ಸರ್. ಎಂ.ವಿಶ್ವೇಶರಯ್ಯ, ಡಾ.ಎಸ್. ರಾಧಕೃಷ್ಣನ್, ಡಾ.ಎ.ಪಿ.ಜೆ.ಅಬ್ದುಲ್ ಕಲಾಂ, ಕುವೆಂಪು, ಬೇಂದ್ರೆ, ಬಸವಣ್ಣ ಇನ್ನೂ ಮುಂತಾದವರ ಜೀವನವನ್ನೂ ತಿಳಿದುಕೊಳ್ಳುವ ಮೂಲಕ ಅವರ ತತ್ತ್ವ ಆದರ್ಶಗಳನ್ನೂ ನಾವೆಲ್ಲರೂ ಪಾಲಿಸಬೇಕೆಂದರು. ಶಿಕ್ಷಣದ ಜೊತೆಗೆ ಸಾಹಿತ್ಯ, ಕಲೆ, ಕ್ರೀಡೆ, ವಿಜ್ಞಾನ ಮತ್ತು ತಂತ್ರಜ್ಞಾನ, ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಬೇಕೆಂದರು. ರೋಟರಿ ಮೈಸೂರು ಸೌತ್‌ಈಸ್ಟ್ ಅಧ್ಯಕ್ಷ ರೋ.ವೈ.ವಿ. ಮುರಳೀಧರ, ಕಾರ್ಯದರ್ಶಿ ರೋ.ಸುರೇಶ್, ರೋ.ಎಂ.ಮೋಹನ್, ರೋ.ವಾಸುದೇವನ್, ರೋ.ಗೋವರ್ಧನ್ ಯಾದವ್, ರೋ. ಎಂ.ಆರ್.ಸಾಲಿಯಾನ್, ರೋ.ಜಿ.ವಿ.ಪಿಂಟೋ, ರೋ.ಮುರಳಿ, ರೋ.ಗಣವಂತ, ರೋ.ರವೀಂದ್ರ, ಎಸಿಎಂಇ ಶಾಲೆಯ ಚೇರ್ಮನ್ ಡಾ.ಶರತ್ ಕುಮಾರ್ ಇತರರು ಉಪಸ್ಥಿತರಿದ್ದರು.

# ಜೂ.5ರಿಂದ ಟ್ರಾವೆಲ್ ಮಾರ್ಟ್

ಮೈಸೂರು: ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ವತಿಯಿಂದ ಜೂ.5 ರಿಂದ 7 ರವರೆಗೆ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಉತ್ತೇಜನ ದೃಷ್ಟಿಯಿಂದ ಮೈಸೂರು ಟ್ರಾವೆಲ್ ಮಾರ್ಟ್ ಶೀರ್ಷಿಕೆಯ ವಿಶಿಷ್ಟ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್. ಪ್ರಶಾಂತ್ ತಿಳಿಸಿದರು.




ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಜೂ. 5 ರಂದು ಬೆಳಗ್ಗೆ11ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಚಾಲನೆ ನೀಡುವರು, ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೆಕಾವತ್, ರಾಜ್ಯ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್, ಸಂಸದ ಯದುವೀರ್, ಶಾಸಕ ಹರೀಶ್ ಗೌಡ ಇನ್ನಿತರರು ಹಾಜರಿರುವರು ಎಂದರು.

ಜೂ. 6 ರಂದು ಬೆಳಗ್ಗೆ ಮಾಧ್ಯಮ ಮತ್ತು ಪ್ರವಾಸೋದ್ಯಮ, ಮೈಸೂರಿನಲ್ಲಿ ಫಿಲಂ ಸಿಟಿ, ಪ್ರವಾಸೋದ್ಯಮ ಹಾಗೂ ಸುಸ್ಥಿರ ಅಭಿವೃದ್ಧಿ ವಿಷಯಗಳ ಬಗ್ಗೆ ಹಿರಿಯ ಪತ್ರಕರ್ತರು, ಇಲ್ಲಿನ ಖ್ಯಾತ ನಟ, ನಟಿಯರು ಚರ್ಚೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಬಳಿಕ ಅದೇ ದಿನ ಸಂಜೆ ಸ್ಕಾಲ್ ಇಂಟರ್ ನ್ಯಾಷನಲ್ ಮೈಸೂರು ಟೂರಿಸಂ ಅಂಡ್ ಹಾಸ್ಪಿಟಾಲಿಟಿ ನೈಟ್ ಎಂಬ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಜರುಗಲಿದೆ. ಜೂ. 7 ರಂದು ಸಮಾರೋಪ ಸಮಾರಂಭ ನಡೆಯಲಿದೆ. ಕಾರ್ಯಕ್ರಮಗಳು ಬೆಳಗ್ಗೆ 10 ರಿಂದ ರಾತ್ರಿ 8 ರವರೆಗೆ ನಡೆಯಲಿವೆ. ಮೈಸೂರು ಮಾತ್ರವಲ್ಲದೆ, ಕೊಡಗು, ಜೈಪುರ, ರಾಜಸ್ತಾನ, ಕೇರಳ, ಭುವನೇಶ್ವರ್, ಗುಜರಾತ್, ಜಮ್ಮು-ಕಾಶ್ಮೀರ ಸೇರಿದಂತೆ ವಿವಿಧೆಡೆಗಳಿಂದ ಆಗಮಿಸುವವರೂ ಈ ಕಾರ್ಯಕ್ರಮಗಳಲ್ಲಿ ಪಾಲ್ಗೊರ್ಳಲಿದ್ದಾರೆ. ಮೂರೂ ದಿನ ಸುಮಾರು 10 ಸಾವಿರ ಮಂದಿ ಭೇಟಿ ನೀಡುವ ನಿರೀಕ್ಷೆಯಿದೆ. ಈ ಎಲ್ಲ ಕಾರ್ಯಕ್ರಮ ವಿಜಯನಗರದ ಜಗನ್ನಾಥ ಕಲಾ ಮತ್ತು ಸಾಂಸ್ಕೃತಿಕ ಕೇಂದ್ರದಲ್ಲಿ ನಡೆಯಲಿವೆ ಎಂದು ವಿವರಿಸಿದರು. ಸ್ಕಾಲ್ ಇಂಟರ್ ನ್ಯಾಷನಲ್ ಮೈಸೂರು ಅಧ್ಯಕ್ಷ ಸಿ.ಎ. ಜಯಕುಮಾರ್, ಮೈಸೂರು ಹೋಟೆಲ್ ಮಾಲೀಕರ ಸಂಘದ ಅದ್ಯಕ್ಷ ಸಿ. ನಾರಾಯಣಗೌಡ ಹಾಗೂ ಇನ್ನಿತರರು ಹಾಜರಿದ್ದರು.

# ನಾರಾಯಣಗೆ ಪರಿಷತ್ ಸ್ಥಾನ ನೀಡಿ

ಮೈಸೂರು: ಮಾಜಿ ಮೇಯರ್ ನಾರಾಯಣ ಅವರಿಗೆ ವಿಧಾನ ಪರಿಷತ್ ಸದಸ್ಯತ್ವ ನೀಡುವ ನಿಟ್ಟಿನಲ್ಲಿ ಸಿಎಂ ಸಿದ್ದರಾಮಯ್ಯ, ಪಕ್ಷದ ಮುಖಂಡರು ಗಮನ ಹರಿಸಬೇಕೆಂದು ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾ ಸಂಘದ ಜಿಲ್ಲಾಧ್ಯಕ್ಷ ಆರ್ಟಿಸ್ಟ್ ನಾಗರಾಜ್ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಹಿಂದೆ ಐಪಿಡಿ ಸಾಲಪ್ಪ ಅವರಿಗೆ ಶಾಸಕ ಸ್ಥಾನ ನೀಡಿದ್ದನ್ನು ಬಿಟ್ಟರೆ ಇದುವರೆಗೂ ಇ ಸಮುದಾಯದವರಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ಸಿಕ್ಕಿಲ್ಲ, ರಾಜ್ಯದಲ್ಲಿ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಚ್ಛತಾ ಕೆಲಸ ಮಾಡುವವರ ಸಂಖ್ಯೆ ಸುಮಾರು 75 ಸಾವಿರ ಇದೆ. ಇದೇ ರೀತಿ ಖಾಸಗಿ ವಲಯದಲ್ಲಿಯೂ ಸುಮಾರು 3 ಲಕ್ಷ ಜನರಿದ್ದು, ಇವರಲ್ಲಿ ಮಹಿಳೆಯರ ಸಂಖ್ಯೆ ಶೇ. 80 ರಷ್ಟಿದೆ. ಹೀಗಿದ್ದರೂ ಇಷ್ಟು ದೊಡ್ಡ ಪ್ರಮಾಣದ ಸ್ವಚ್ಛತಾ ಕಾರ್ಮಿಕರ ಬಗ್ಗೆ ಧ್ವನಿಯೆತ್ತುವವರು ಸರ್ಕಾರದಲ್ಲಿ ಯಾರೂ ಇಲ್ಲ. ಹೀಗಾಗಿ ಈ ಕೊರತೆ ನೀಗಿಸಲು ನಾರಾಯಣ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಬೇಕೆಂದು ಕೋರಿದರು. ರಾಜ್ಯ ಉಪಾಧ್ಯಕ್ಷ ಆರ್.ಶಿವ, ಇನ್ನಿತರ ಪದಾಧಿಕಾರಿಗಳಾದ ಯತಿರಾಜ್, ಕೆ.ನಾಗರತ್ನ, ಎಂ.ಡಿ.ವೆಂಕಟೇಶ್ ಮೊದಲಾದವರು ಇದ್ದರು.



## ಕಟ್ಟಡ ನವೀಕರನಕ್ಕೆ ಅನುದಾನ ಹೊಸ ಸದಸ್ಯರಿಗೆ ಸಾಲ ಕೊಡಿಸುವ ಭರವಸೆ

# ಪಿಎಸಿಸಿ ಬ್ಯಾಂಕ್‌ಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ

ಚಾಮರಾಜನಗರ, ನಗರದ ಸಮೀಪದ ಕರಿನಂಜನಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಹಕಾರ ಸಂಘಕ್ಕೆ ಕ್ಷೇತ್ರದ ಶಾಸಕರು ಆದ ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಸಿ. ಪುಟ್ಟರಂಗಶೆಟ್ಟಿ ಭೇಟಿ ನೀಡಿ, ಸಂಘದ ನೂತನ ಸದಸ್ಯರಿಗೆ ಸಾಲ ನೀಡುವುದು ಸೇರಿದಂತೆ ಸಂಘದ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡುವ ಭರವಸೆ ನೀಡಿದರು.



ಗ್ರಾಮದ ಬ್ಯಾಂಕ್ ಅಧ್ಯಕ್ಷರು ಆಡಳಿತ ಮಂಡಲಿಯವರ ಮನವಿ ಮೇರೆಗೆ ಬ್ಯಾಂಕಿಗೆ ಆಗಮಿಸಿದ ಪುಟ್ಟರಂಗಶೆಟ್ಟಿ ಅವರನ್ನು ಸಂಘದ ಅಧ್ಯಕ್ಷರು ಹಾಗು ನಿರ್ದೇಶಕರು ಸನ್ಮಾನಿಸಿದರು. ಬಳಿಕ ಅವರು ಬ್ಯಾಂಕಿನ ವಹಿವಾಟು ಹಾಗೂ ಸದಸ್ಯರಿಗೆ ಇದುವರೆಗೆ ನೀಡುವ ಸಾಲಗಳ ವಿವರವನ್ನು ಪಡೆದುಕೊಂಡರು. ಬಳಿಕ ಮಾತನಾಡಿದ ಶಾಸಕರು, ಸಹಕಾರ ಸಂಘವನ್ನು ಮುನ್ನಡೆಸಲು ಪ್ರಾಮಾಣಕತೆ ಹಾಗೂ ನಿಷ್ಠೆ ಇರಬೇಕು. ಕಾರ್ಯದರ್ಶಿ ಮತ್ತು ಅಧ್ಯಕ್ಷರು ಪಾರದರ್ಶಕವಾಗಿ ನಡೆದು ಕೊಂಡರೆ ಸಂಘ ಹೆಚ್ಚಿನ ಅಭಿವೃದ್ಧಿ ಹೊಂದುತ್ತದೆ. ಹೀಗಾಗಿ ಉತ್ತರ ಕರ್ನಾಟಕ ಮತ್ತು ಕರಾವಳಿ ಭಾಗದಲ್ಲಿ ಸಹಕಾರ ಸಂಘಗಳು ಸರ್ಕಾರಿ ಬ್ಯಾಂಕ್‌ಗಳಿಂದಲು ಹೆಚ್ಚಿನ ವಹಿವಾಟು ಮಾಡುತ್ತಿದೆ. ಸಂಘದ ನಿರ್ದೇಶಕರು ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಂಘದ ಅಭಿವೃದ್ದಿಯಾಗಬೇಕಾದರೆ, ಹೊಸ ಸದಸ್ಯರಿಗೂ ಸಹ ಸಾಲ ದೊರೆಯುವಂತಾಗಬೇಕು. ಈ ನಿಟ್ಟಿನಲ್ಲಿ ಎಂಡಿಸಿಸಿ ಬ್ಯಾಂಕ್ ಪ್ರತಿನಿಧಿಯಾಗಿ ಹೊಸ ಸದಸ್ಯರಿಗೆ ಹೆಚ್ಚಿನ ಸಾಲ ನೀಡಬೇಕೆಂದು ಮನವಿ ಮಾಡಿಕೊಂಡಿದ್ದೇನೆ. ಅಫೆಕ್ಸ್ ಬ್ಯಾಂಕ್ ಚುನಾವಣೆ ರದ್ದಾಗಿರುವ ಕಾರಣದಿಂದ ನಮ್ಮ ಬ್ಯಾಂಕ್‌ಗಳಿಗೆ ಸಾಲ ನೀಡುವುದು ವಿಳಂಬವಾಗುತ್ತದೆ. ಹೀಗಾಗಿ ಆಡಳಿತ ಮಂಡಲಿಯವರು ಅದಷ್ಟು ಬೇಗ ಹೊಸ ಸದಸ್ಯರ ಪಟ್ಟಿಯನ್ನು ಕಳುಹಿಸಿಕೊಡಿ, ಮಂಜೂರಾತಿ ಮಾಡಿಸೋಣ ಎಂದರು.

ಸಂಘದ ಅಧ್ಯಕ್ಷರ ಮನವಿಗೆ ಸ್ಪಂದಿಸಿದ ಶಾಸಕರು. ಸಹಕಾರ ಸಂಘದ ಅಭಿವೃದ್ದಿಗ ಇತರೇ ಖಾಸಗಿಯವರ ಹಣವನ್ನು ಪಡೆದುಕೊಂಡು ವ್ಯವಹಾರ ಮಾಡಿ, ಅವರಿಗೆ ಕಡಿಮೆ ಬಡ್ಡಿಯನ್ನು ನೀಡುವ ಜೊತೆಗೆ ಠೇವಣ ಇಡುವ ಸದಸ್ಯರು ವಿಶ್ವಾಸವನ್ನು ಗೆದ್ದರೆ ಬ್ಯಾಂಕ್ ಮುನ್ನಡೆಯುತ್ತದೆ. ಕಟ್ಟಡ ನಿರ್ಮಾಣಕ್ಕೆ ಅನುದಾನ ಹಾಗು ಕಚೇರಿಗೆ ಪಿಠೋಪಕರಣಗಳನ್ನು ಕೊಡಿಸಿಕೊಡುವ ಭರವಸೆಯನ್ನು ನೀಡಿದರು. ಸಂಘದ ಅಧ್ಯಕ್ಷ ಈಶ್ವರ್ ಮಾತನಾಡಿ, ಕರಿನಂಜನಪುರ ಸಹಕಾರ ಸಂಘವು ಬಹಳ ಹಳೆಯ ಸಂಘವಾಗಿದ್ದು, ಆದಾಯ ಕಡಿಮೆ ಇದ್ದು, ಸದಸ್ಯತ್ವ ಹೊಂದಿರುವ ಎಲ್ಲರಿಗೂ ಎಲ್ಲಾ ರೀತಿಯ ಸಾಲವನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಶಾಸಕರು ಹೆಚ್ಚಿನ ಅನುದಾನ ಹಾಗೂ ಸೌಲಭ್ಯವನ್ನು ಕಲ್ಪಿಸಿಕೊಡಬೇಕು. ಬ್ಯಾಂಕ್‌ಗೆ ಮೂಲಭೂತ ಸೌಲಭ್ಯ ಕಲ್ಪಿಸಿಕೊಡುವಂತೆ ಮನವಿ ಮಾಡಿದರು. ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಮಹದೇವಶೆಟ್ಟಿ, ಮಾಜಿ ಅಧ್ಯಕ್ಷ ಆರ್.ಡಿ. ಮಹೇಶ್, ನಿರ್ದೇಶಕರಾದ ಮನೋಜ್‌ಪಟೇಲ್,ಚಂದ್ರಪ್ಪ, ವೃಷಬೇಂದ್ರಪ್ಪ, ಉಮೇಶ, ಜಯರಾಮನಾಯಕ, ನಾಗರತ್ನಮ್ಮ, ಎಂಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಮಂಜು, ಸಿಇಒ ರೂಪೇಶ ರಾಜೇ ಅರಸ್ ಮೊದಲಾದವರು ಹಾಜರಿದ್ದರು.

## ಎಸ್ಸಿ, ಎಸ್ಟಿ ಸಭೆ: ಜಿಲ್ಲಾ ಮಟ್ಟದ ಅಧಿಕಾರಿಗಳು ಗೈರಿಗೆ ಆಕ್ಷೇಪ



ಮೈಸೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜಿಲ್ಲಾ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಗೈರಿಗೆ ಸಮಿತಿ ಸದಸ್ಯ ಚಿಕ್ಕಜವರಯ್ಯ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಡಾ.ಬಾಬು ಜಗಜೀವನ್ ರಾಂ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಗೆ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಪಾಲಿಕೆ ಆಯುಕ್ತರು, ಎಂಡಿಎ ಆಯುಕ್ತರ ಗೈರಿಗೆ ಅಸಮಾಧಾನ ವ್ಯಕ್ತಪಡಿಸಿದರು. ಪರಿಶಿಷ್ಟ ಜಾತಿಯ ಜನಗಳ ಕಷ್ಟಕಾರ್ಪಣ್ಯಗಳನ್ನು ಕೇಳಿ ಬಗೆಹರಿಸಬೇಕಾದ ಮಹತ್ವದ ಸಭೆಗಳಿಗೆ ಜಿಲ್ಲಾಧಿಕಾರಿಗಳ ಸಹಿತವಾಗಿ ಜಿಲ್ಲಾಮಟ್ಟದ ಅಧಿಕಾರಿಗಳು ಗೈರಾಗಿದ್ದಾರೆ. 3 ತಿಂಗಳಿಗೊಮ್ಮೆ ಕರೆಯಬೇಕಿದ್ದ ಸಭೆಯನ್ನು 6 ತಿಂಗಳಿಗೆ ಕರೆಯುತ್ತಿದ್ದಾರೆ. ಅಹವಾಲು ಕೇಳಿಸಿಕೊಳ್ಳಬೇಕಾದ ಅಧಿಕಾರಿಗಳೇ ಗೈರಾಗಿದ್ದಾರೆ ಎಂದು ಸಭೆಯಲ್ಲಿ ಹೇಳಿದರು.

ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ ಅಂಬೇಡ್ಕರ್ ಅವರ ಪ್ರತಿಮೆಗಳಿಗೆ ಅವಮಾನ ಮಾಡಲಾಗುತ್ತಿದೆ. ದಲಿತರ ಭೂ ಸಮಸ್ಯೆಗಳು ಬಗೆಹರಿದಿಲ್ಲ. ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ಏರಿಕೆಯಾಗುತ್ತಿವೆ. ಶೇ. 24ರ ಅನುದಾನದ ಹಂಚಿಕೆ, ಎಸ್‌ಪಿ, ಟಿಎಸ್‌ಪಿ, ಹೊರಗುತ್ತಿಗೆಯಲ್ಲಿ ಮೀಸಲಾತಿ ಕೊಡುವುದು, ಅಂತರ್ಜಾತಿ ವಿವಾಹಿತರಿಗೆ ಸೌಲಭ್ಯ ಕೊಡುವ ಗಂಭೀರ ವಿಷಯಗಳ ಬಗ್ಗೆ ಚರ್ಚಿಸುವ ಸಭೆಗೆ ಜವಾಬ್ದಾರಿಯಿಂದ ವರ್ತಿಸಬೇಕಾದ ಅಧಿಕಾರಿಗಳು ಗೈರಾಗಿರುವುದು ಸರಿಯಲ್ಲ. ಪೊಲೀಸ್ ಇಲಾಖೆ ವತಿಯಿಂದ ನಡೆಸಲಾಗುವ ಕುಂದುಕೊರತೆ ಸಭೆಗಳಿಗೆ ಆಯಾ ವ್ಯಾಪ್ತಿಯ ಪರಿಶಿಷ್ಟ ಜಾತಿ, ಪಂಗಡದ ಮುಂಖಡರನ್ನು ಆಹ್ವಾನಿಸಿದರೆ, ಬಹಳಷ್ಟು ತೊಂದರೆಗಳ ಬಗ್ಗೆ ಚರ್ಚಿಸಬಹುದು ಎಂದರು.

ಶಾಲಾ, ಕಾಲೇಜು ದಾಖಲಾತಿ ಪ್ರಾರಂಭವಾಗಿದ್ದು, ವಿದ್ಯಾರ್ಥಿಗಳಿಗೆ ದಾಖಲಾತಿಗೆ ತೊಂದರೆಯಾಗದಂತೆ ಪರಿಶಿಷ್ಟ ಜಾತಿ, ಪಂಗಡ ಸೇರಿದಂತೆ ಇತರೆ ಜಾತಿ ಪ್ರಮಾಣ ಪತ್ರ ಕೋರಿ ಸಲ್ಲಿಕೆಯಾಗುವ ಅರ್ಜಿಗಳಿಗೆ ಆದ್ಯತೆ ನೀಡಿ ವಿತರಣೆ ಮಾಡುವಂತೆ ಅಪರ ಜಿಲ್ಲಾಧಿಕಾರಿ ಐಶ್ವರ್ಯ ಆರ್ ತಹಶೀಲ್ದಾರ್ ಗಳಿಗೆ ಸೂಚನೆ ನೀಡಿದರು. ತಾಲ್ಲೂಕು ಮಟ್ಟದಲ್ಲಿ ನಿಗದಿತವಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜಾಗೃತ ಮತ್ತು ಉಸ್ತುವಾರಿ ಸಮಿತಿ ನಡೆಯುತ್ತಿಲ್ಲ. ಸಮಿತಿ ರಚಿಸಿಕೊಂಡು ನಿಗದಿತವಾಗಿ ಸಭೆ ನಡೆಸುವಂತೆ ಮನವಿ ಮಾಡಿದರು. ಮೈಸೂರು ತಾಲ್ಲೂಕು ಆಲನಹಳ್ಳಿ ಗ್ರಾಮದ ಸರ್ವೆನಂ. 28ರಲ್ಲಿ ಜಮೀನು ಒತ್ತುವರಿಯಾಗಿರುವ ಬಗ್ಗೆ ಚರ್ಚಿಸಿದಾಗ ಅಪರ ಜಿಲ್ಲಾಧಿಕಾರಿ ಸ್ಥಳ ಪರಿಶೀಲನೆ ನಡೆಸಿ ಒತ್ತುವರಿಯಾಗಿದ್ದಲ್ಲಿ ಕ್ರಮ ಕೈಗೊಳ್ಳುವಂತೆ ಮೈಸೂರು ತಹಶೀಲ್ದಾರ್ ಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಜಿಲ್ಲಾ ಜಾಗೃತ ಮತ್ತು ಉಸ್ತುವಾರಿ ಸಮಿತಿಯ ಸದಸ್ಯರಾದ ಎಸ್.ಟಿ ರವಿಕುಮಾರ, ಪಾರ್ವತಮ್ಮ, ವೇಣುಗೋಪಾಲ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸವಿತಾ, ಮಹಾನಗರಪಾಲಿಕೆ ಉಪ ಆಯುಕ್ತೆ ವೀಣಾ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಸೇರಿ ಇನ್ನಿತರರು ಉಪಸ್ಥಿತರಿದ್ದರು.

> ಮುಖ್ಯಮಂತ್ರಿಗಳ ಮೈಸೂರಿಗೆ ಆಗಮನ, ಇನ್ನಿತರ ತುರ್ತು ಕೆಲಸಗಳಿದ್ದರೆ ಸಭೆಯನ್ನು ಮತ್ತೊಂದು ದಿನ ನಿಗದಿ ಮಾಡಬಹುದಿತ್ತು. ದಲಿತರ ಸಮಸ್ಯೆಗಳ ಇತ್ಯರ್ಥಮಾಡಬೇಕಾದ ಜಿಲ್ಲಾ ಮಟ್ಟದ ಅಧಿಕಾರಿಗಳ ಗೈರು ಜವಾಬ್ದಾರಿಯ ನಡೆ ಅಲ್ಲ.
>
> –ಅಹಿಂದ ಜವರಪ್ಪ

## ಯಾದವಗಿರಿ ಗೂಡ್ಸ್ ಟರ್ಮಿನಲ್ ರಸ್ತೆ ಸಂಚಾರಕ್ಕೆ ಮುಕ್ತ



ಮೈಸೂರು: ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿ ಯಾದವಗಿರಿ ಗೂಡ್ಸ್ ಟರ್ಮಿನಲ್ ರಸ್ತೆಯನ್ನು ಲಾರಿಗಳಿಗೆ ಸಂಚಾರ ಮುಕ್ತ ಮಾಡಿಸುವಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಯಶಸ್ವಿಯಾದರು.

ಯಾದವಗಿರಿ ಬಳಿಯ ಗೂಡ್ಸ್ ಟರ್ಮಿನಲ್ ರಸ್ತೆಯನ್ನು ಬಂದ್ ಮಾಡಿದ್ದರಿಂದ ಲಾರಿಗಳು ಐದಾರು ಕಿಲೋ ಮೀಟರ್ ಬಳಸಿ ಬರಬೇಕಾಗಿತ್ತು. ಇದರಿಂದ ಲಾರಿ ಮಾಲೀಕರಿಗೆ ಸಾವಿರಾರು ರೂಪಾಯಿ ನಷ್ಟವಾಗುತ್ತಿತ್ತು. ಈ ಕುರಿತು ಲಾರಿ ಮಾಲೀಕರ ಸಂಘದ ಪದಾಧಿಕಾರಿಗಳು ಹತ್ತು ದಿನಗಳ ಹಿಂದೆ ಸಂಸದ ಯದುವೀರ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು. ಈ ಹಿನ್ನೆಲೆಯಲ್ಲಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ ಯದುವೀರ್ ಒಡೆಯರ್ ರೈಲ್ವೆ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ, ರೈಲ್ವೆ ಗೂಡ್ಸ್ ಟರ್ಮಿನಲ್ ರಸ್ತೆಯನ್ನು ಸಂಚಾರಕ್ಕೆ ಮುಕ್ತಗೊಳಿಸಿದರು. ನಂತರ ಮಾತನಾಡಿ, ಈ ಸಮಸ್ಯೆ ಕುರಿತು ನನ್ನ ಗಮನಕ್ಕೆ ಬಂದ ಕೂಡಲೇ ರೈಲ್ವೆ ಅಧಿಕಾರಿಗಳೊಂದಿಗೆ ಚರ್ಚಿಸಿದೆ. ಇದಕ್ಕೆ ಪೂರಕವಾಗಿ ಸ್ಪಂದಿಸಿರುವ ಅಧಿಕಾರಿಗಳು ಬೈಪಾಸ್ ಮಾದರಿಯಲ್ಲಿರುವ ಟರ್ಮಿನಲ್ ರಸ್ತೆಯನ್ನು ಸಂಚಾರಕ್ಕೆ ಮುಕ್ತಗೊಳಿಸಿದರು ಎಂದರು.

ಈ ಟರ್ಮಿನಲ್ ದಾರಿ ಸಂಚಾರಕ್ಕೆ ಮುಕ್ತವಾಗಿದ್ದರಿಂದ ಪ್ರತಿಯೊಂದು ಲಾರಿಗೆ ತಿಂಗಳಿಗೆ 10 ಸಾವಿರ ರೂಪಾಯಿ ಉಳಿತಾಯವಾಗಲಿದೆ. ಇದು ಲಾರಿಗಳ ಮಾಲೀಕರಿಗೆ, ಚಾಲಕರಿಗೆ ಸಾಕಷ್ಟು ಅನುಕೂಲವಾಗಲಿದೆ.ಯಾದವಗಿರಿ ಗೂಡ್ಸ್ ಟರ್ಮಿನಲ್ ಅನ್ನು ಸ್ಥಳಾಂತರ ಮಾಡಲಾಗುತ್ತದೆ ಎಂಬ ವದಂತಿ ಹರಡಿದೆ. ಆದರೆ ಇದು ಕಪೋಲಕಲ್ಪಿತ. ಈ ರೀತಿಯ ಯಾವುದೇ ಪ್ರಸ್ತಾವನೆ ರೈಲ್ವೆ ಇಲಾಖೆ ಮುಂದಿಲ್ಲ. ಈ ಗೂಡ್ಸ್ ಟರ್ಮಿನಲ್ ಸ್ಥಳಾಂತರ ಸ್ಥಳಾಂತರವಾಗುವುದಿಲ್ಲ, ವಂದೇಭಾರತ್ ರೈಲ್ವೆ ನಿರ್ವಹಣೆಗೂ ಇದು ಬಳಕೆಯಾಗಲಿದೆ. ಇಂಥ ವದಂತಿಗಳನ್ನು ಯಾರೂ ಹಬ್ಬಿಸಬಾರದು. ಗೂಡ್ಸ್ ಟರ್ಮಿನಲ್ ಇಲ್ಲೇ ಇರಲಿದೆ ಎಂದು ಸ್ಪಷ್ಟಪಡಿಸಿದರು.

ಲಾರಿ ಮಾಲೀಕರ ಸಂಘದ ಅಧ್ಯಕ್ಷ ಶಾಹೀದ್ ಮಾತನಾಡಿ, ಹಲವಾರು ವರ್ಷಗಳಿಂದ ಈ ಕುರಿತು ಸಮಸ್ಯೆ ಎದುರಿಸುತ್ತಿದ್ದೇವು. ಈ ಬಗ್ಗೆ ಹಿಂದಿನ ಸಂಸದರಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಪ್ರತಿ ದಿನ 600ಕ್ಕೂ ಹೆಚ್ಚು ಲಾರಿಗಳು ಈ ಟರ್ಮಿನಲ್ ರಸ್ತೆಯಲ್ಲಿ ಈಗ ಸಂಚರಿಸುತ್ತದೆ. ಐದಾರು ಕಿಲೋ ಮೀಟರ್ ಕಡಿಮೆಯಾಗುತ್ತದೆ. ಇದರಿಂದ ಸಾವಿರಾರು ರೂಪಾಯಿ ಹಣ ಉಳಿತಾಯವಾಗುತ್ತದೆ. ಸಂಸದರ ನೆರವನ್ನು ನಾವು ಸದಾ ಸ್ಮರಿಸುತ್ತೇವೆ ಎಂದು ತಿಳಿಸಿದರು. ಯಾದವಗಿರಿ ನಿವಾಸಿಗಳ ಸಂಘದ ಅಧ್ಯಕ್ಷ ಎಸ್ ಕೆ ದಿನೇಶ್, ಸಾಮಾಜಿಕ ಉದ್ಯಮಿ ನಿಖಿಲೇಶ್, ಜಿಲ್ಲಾ ಸಂಘದ ಅಧ್ಯಕ್ಷ ಕೋದಂಡರಾಮ್ ಇತರರು ಇದ್ದರು. ಎಂದು ಶಾಹೀದ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



# ಹಲಸಿನ ಆಸೆಗೆ ಆನೆಗಳ ಲಗ್ಗೆ

## ಚಿರತೆ ಆತಂಕದ ನಡುವೆ ಈಗ ಕಾಡಾನೆ ಭೀತಿ

ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟ ಹಾಗೂ ಕಾವೇರಿ ವನ್ಯಜೀವಿ ಧಾಮದ ವ್ಯಾಪ್ತಿಯಲ್ಲಿ ವನ್ಯಮೃಗಗಳ ಹಾವಳಿ ಮಿತಿಮೀರಿದ್ದು, ಸಾರ್ವಜನಿಕರು ಪ್ರಾಣಭೀತಿಯಲ್ಲಿ ಕಾಲ ಕಳೆಯುವಂತಾಗಿದೆ. ಇತ್ತೀಚೆಗಷ್ಟೇ ಬಾಲಕನೊಬ್ಬನನ್ನು ಬಲಿಪಡೆದ ಚಿರತೆ ಆತಂಕ ಮಾಸುವ ಮುನ್ನವೇ, ಈಗ ಹಲಸಿನ ಹಣ್ಣಿನ ಆಸೆಗೆ ಕಾಡಾನೆಗಳು ಗ್ರಾಮಗಳಿಗೆ ಲಗ್ಗೆ ಇಡುತ್ತಿರುವುದು ಸ್ಥಳೀಯರ ನಿದ್ದೆಗೆಡಿಸಿದೆ. ಅರಣ್ಯದ ಅಂಚಿನಲ್ಲಿರುವ ಹಳ್ಳಿಗಳು ಈಗ ಅಕ್ಷರಶಃ ಕಾಡುಪ್ರಾಣಿಗಳ ಆವಾಸಸ್ಥಾನಗಳಾಗಿ ಬದಲಾಗುತ್ತಿವೆ.

### ಇಂಡಿಗನತ್ತ ಗ್ರಾಮದಲ್ಲಿ ಚಿರತೆ ಬೇಟೆಗಾಗಿ ಹಗಲಿರುಳು ಕಾರ್ಯಾಚರಣೆ

ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದ ಸಮೀಪವಿರುವ ಇಂಡಿಗನತ್ತ ಗ್ರಾಮದಲ್ಲಿ ಚಿರತೆ ದಾಳಿಗೆ ಬಾಲಕ ಬಲಿಯಾದ ಘಟನೆ ಇಡೀ ಜಿಲ್ಲೆಯನ್ನು ಬೆಚ್ಚಿಬೀಳಿಸಿದೆ. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯು ಚಿರತೆಯನ್ನು ಸೆರೆಹಿಡಿಯಲು ತೀವ್ರಗತಿಯ ಕಾರ್ಯಾಚರಣೆ ಕೈಗೊಂಡಿದೆ. ಸುಮಾರು 60ಕ್ಕೂ ಹೆಚ್ಚು ಸಿಬ್ಬಂದಿಗಳನ್ನು ಒಳಗೊಂಡ ವಿಶೇಷ ತಂಡವು ಹಗಲಿರುಳು ಶೋಧ ಕಾರ್ಯ ನಡೆಸುತ್ತಿದೆ. ಆಧುನಿಕ ತಂತ್ರಜ್ಞಾನದ ಮೊರೆ ಹೋಗಿರುವ ಇಲಾಖೆಯು ಡ್ರೋನ್ ಹಾಗೂ ಥರ್ಮಲ್ ಡ್ರೋನ್ಗಳನ್ನು ಬಳಸಿ ಚಿರತೆಯ ಚಲನವಲನದ ಮೇಲೆ ನಿಗಾ ಇರಿಸಿದೆ. ಅರಣ್ಯದ ವಿವಿಧ ಆಯಕಟ್ಟಿನ ಜಾಗಗಳಲ್ಲಿ ಕ್ಯಾಮರಾ ಟ್ರ್ಯಾಪ್ಗಳನ್ನು ಅಳವಡಿಸಲಾಗಿದ್ದು, ಬೆಳಗಿನ ಜಾವ ಚಿರತೆಯು ಓಡಾಡುತ್ತಿರುವ ದೃಶ್ಯಗಳು ಸೆರೆಯಾಗಿರುವುದು ಅಧಿಕಾರಿಗಳಲ್ಲಿ ಆಶಾಭಾವನೆ ಮೂಡಿಸಿದೆ. ಚಿರತೆಯನ್ನು ಸೆರೆಹಿಡಿಯಲು ವಿವಿಧ ಮಾದರಿಯ ಬೋನುಗಳನ್ನು ಸಜ್ಜುಗೊಳಿಸಲಾಗಿದ್ದು, ಕಾರ್ಯಾಚರಣೆ ಮೂರನೇ ದಿನವೂ ಮುಂದುವರೆದಿದೆ.





### ಪಾಲಾರ್ ರಸ್ತೆಯಲ್ಲಿ ವಾಹನ ಸವಾರರ ಮೇಲೆ ಗಜಪಡೆಯ ದರ್ಬಾರು

ಕಾಡಾನೆಗಳ ಹಾವಳಿ ಕೇವಲ ಗ್ರಾಮಗಳಿಗೆ ಸೀಮಿತವಾಗದೆ ಮುಖ್ಯ ರಸ್ತೆಗಳಿಗೂ ವ್ಯಾಪಿಸಿದೆ. ಹನೂರು ತಾಲೂಕಿನ ಪಾಲಾರ್ ರಸ್ತೆಯಲ್ಲಿ ಮಂಗಳವಾರ ರಾತ್ರಿ ಕಾಡಾನೆಗಳ ಗುಂಪು ರಸ್ತೆ ಬದಿಯಲ್ಲಿ ಓಡಾಡುತ್ತಿದ್ದುದನ್ನು ಕಂಡ ವಾಹನ ಸವಾರರು ದಿಗಿಲುಗೊಂಡಿದ್ದಾರೆ. ರಸ್ತೆಯ ಎರಡು ಬದಿಗಳಲ್ಲಿ ಆನೆಗಳು ನಿಂತಿದ್ದರಿಂದ ವಾಹನಗಳನ್ನು ಚಲಾಯಿಸುವುದು ಅಸಾಧ್ಯವಾಗಿತ್ತು. ಕೆಲವು ಸವಾರರು ತಮ್ಮ ಮೊಬೈಲ್ ಫೋನ್ಗಳಲ್ಲಿ ಆನೆಗಳ ಓಡಾಟದ ದೃಶ್ಯಗಳನ್ನು ಸೆರೆಹಿಡಿದಿದ್ದು, ಈ ವಿಡಿಯೋಗಳು ಈಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಅರಣ್ಯ ಪ್ರದೇಶದ ನಡುವೆ ಹಾದುಹೋಗುವ ಈ ರಸ್ತೆಯಲ್ಲಿ ಸಂಚರಿಸುವ ಪ್ರತಿಯೊಬ್ಬರೂ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

### ಹಲಸಿನ ಹಣ್ಣಿನ ಆಸೆಗೆ ಮನೆ ಬಾಗಿಲಿಗೇ ಬರುತ್ತಿರುವ ಕಾಡಾನೆಗಳು

ಒಂದೆಡೆ ಚಿರತೆಯ ಭೀತಿಯಿಂದಾಗಿ ಗ್ರಾಮಸ್ಥರು ಮನೆಯಿಂದ ಹೊರಬರಲು ಹೆದರುತ್ತಿದ್ದರೆ, ಮತ್ತೊಂದೆಡೆ ಕಾಡಾನೆಗಳ ಹಾವಳಿ ಜನರನ್ನು ಮತ್ತಷ್ಟು ಕಂಗೆಡಿಸಿದೆ. ಇಂಡಿಗನತ್ತ ಗ್ರಾಮವು ದಟ್ಟ ಅರಣ್ಯದ ನಡುವೆ ಇರುವುದರಿಂದ, ಕಾಡಾನೆಗಳು ಅತಿ ಸುಲಭವಾಗಿ ಗ್ರಾಮದೊಳಗೆ ನುಗ್ಗುತ್ತಿವೆ. ಪ್ರಸ್ತುತ ಹಲಸು ಮತ್ತು ಮಾವಿನ ಹಣ್ಣಿನ ಸೀಸನ್ ಆಗಿರುವುದರಿಂದ, ಹಣ್ಣಿನ ವಾಸನೆಗೆ ಆಕರ್ಷಿತವಾಗುವ ಆನೆಗಳು ಜನವಸತಿ ಪ್ರದೇಶಗಳತ್ತ ದಾಪುಗಾಲು ಹಾಕುತ್ತಿವೆ. ಇತ್ತೀಚೆಗೆ ಸಿದ್ದರಾಜು ಎಂಬುವವರ ಮನೆಯ ಹತ್ತಿರವಿರುವ ಹಲಸಿನ ಮರಕ್ಕೆ ಲಗ್ಗೆ ಇಟ್ಟ ಆನೆಗಳ ಹಿಂಡು, ಇಡೀ ರಾತ್ರಿ ಅಲ್ಲೇ ಬೀಡುಬಿಟ್ಟು ಹಣ್ಣುಗಳನ್ನು ತಿಂದು ತೇಗಿದೆ. ಇದರಿಂದಾಗಿ ಮನೆಯೊಳಗಿದ್ದ ಕುಟುಂಬದವರು ರಾತ್ರಿಯಿಡೀ ಭಯದ ನೆರಳಿನಲ್ಲಿ ಕಳೆಯುವಂತಾಯಿತು. ಚಿರತೆ ಎಲ್ಲಿ ದಾಳಿ ಮಾಡುತ್ತದೆಯೋ ಎಂಬ ಆತಂಕದ ನಡುವೆ, ಮನೆ ಬಾಗಿಲಿಗೇ ಆನೆಗಳು ಬರುತ್ತಿರುವುದು ಜನರ ಜೀವನವನ್ನು ನರಕ ಸದೃಶವಾಗಿಸಿದೆ.

### ಅರಣ್ಯ ಇಲಾಖೆಯ ನಿರ್ಲಕ್ಷ್ಯದ ವಿರುದ್ಧ ಆಕ್ರೋಶ ಹೊರಹಾಕಿದ ಸ್ಥಳೀಯರು

ಸತತವಾಗಿ ನಡೆಯುತ್ತಿರುವ ವನ್ಯಜೀವಿಗಳ ದಾಳಿಯಿಂದ ಕಂಗಾಲಾಗಿರುವ ಗ್ರಾಮಸ್ಥರು ಈಗ ಅರಣ್ಯ ಇಲಾಖೆಯ ವಿರುದ್ಧ ತಮ್ಮ ಅಸಮಾಧಾನವನ್ನು ಹೊರಹಾಕುತ್ತಿದ್ದಾರೆ. ಅರಣ್ಯ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯವೇ ಮಾನವ–ವನ್ಯಜೀವಿ ಸಂಘರ್ಷಕ್ಕೆ ಪ್ರಮುಖ ಕಾರಣ ಎಂದು ಸ್ಥಳೀಯರು ಆರೋಪಿಸುತ್ತಿದ್ದಾರೆ. ಕಾಡುಪ್ರಾಣಿಗಳು ಗ್ರಾಮದೊಳಗೆ ಬರದಂತೆ ತಡೆಯಲು ಶಾಶ್ವತವಾದ ಸೋಲಾರ್ ಬೇಲಿ ಅಥವಾ ಕಂದಕಗಳನ್ನು ನಿರ್ಮಿಸುವಲ್ಲಿ ಇಲಾಖೆ ವಿಫಲವಾಗಿದೆ ಎಂಬುದು ಜನರ ದೂರಾಗಿದೆ. ಮುಖ್ಯರಸ್ತೆಗೆ ಬರುತ್ತಿರುವ ಆನೆಗಳನ್ನು ಕಾಡಿಗೇ ಅಟ್ಟಲು ತುರ್ತು ಕ್ರಮ ಕೈಗೊಳ್ಳಬೇಕು ಹಾಗೂ ಚಿರತೆಯನ್ನು ಆದಷ್ಟು ಬೇಗ ಸೆರೆಹಿಡಿದು ಜನರಿಗೆ ನೆಮ್ಮದಿಯ ಬದುಕು ನೀಡಬೇಕು ಎಂದು ಗ್ರಾಮಸ್ಥರು ತೀವ್ರವಾಗಿ ಒತ್ತಾಯಿಸಿದ್ದಾರೆ. ಇಲಾಖೆಯು ಕೇವಲ ತಾತ್ಕಾಲಿಕ ಕ್ರಮಗಳಿಗೆ ಸೀಮಿತವಾಗದೆ, ದೀರ್ಘಕಾಲೀನ ಪರಿಹಾರವನ್ನು ಕಂಡುಕೊಳ್ಳಬೇಕಿದೆ ಎಂಬ ಕೂಗು ಬಲವಾಗಿ ಕೇಳಿಬರುತ್ತಿದೆ.

## ನೀಟ್ ಸೋರಿಕೆ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹ

ಮೈಸೂರು: ನೆಟ್ ಯುಜಿಸಿ ಪ್ರಶ್ನೆ ಪತ್ರಿಕೆ ಸೋರಿಕೆಯ ಹಿನ್ನಲೆಯಲ್ಲಿ ಪರೀಕ್ಷೆ ರದ್ದುಗೊಳಿಸಿದ್ದು, ಈ ಕುರಿತು ಕೂಡಲೇ ಪ್ರಶ್ನೆ ಪತ್ರಿಕೆ ಸೋರಿಕೆಗೆ ಕಾರಣರಾಗಿರುವವರಿಗೆ ನಿದರ್ಶನೀಯ ಶಿಕ್ಷೆ ವಿಧಿಸಿ ಹಾಗೂ ಎನ್‌ಟಿಎಯನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಮೈಸೂರಿನ ಹಳೆ ಡಿಸಿ ಕಚೇರಿ ಹತ್ತಿರ ಎಐಡಿಎಸ್‌ಓ ಜಿಲ್ಲಾ ಸಮಿತಿ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಎಐಡಿಎಸ್ ಓ ಜಿಲ್ಲಾ ಕಾರ್ಯದರ್ಶಿ ನಿತಿನ್ ಮಾತನಾಡಿ, ಪದೇ ಪದೇ ಮರುಕಳಿಸುತ್ತಿರುವ ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಕೇವಲ ಒಂದು ಪರೀಕ್ಷಾ ಸಂಸ್ಥೆಯ ವೈಫಲ್ಯವಲ್ಲ; ಇದು ಲಕ್ಷಾಂತರ ಪ್ರಾಮಾಣಿಕ ವಿದ್ಯಾರ್ಥಿಗಳ ಬೆವರು ಮತ್ತು ಕನಸುಗಳ ಮೇಲೆ ಎಸಗುತ್ತಿರುವ ಘೋರ ದೌರ್ಜನ್ಯವಾಗಿದೆ. ಕೇವಲ ಮೂರು ವರ್ಷಗಳಲ್ಲಿ ಎರಡನೇ ಬಾರಿಗೆ, ವೈದ್ಯಕೀಯ ಶಿಕ್ಷಣದ ಕನಸು ಹೊತ್ತವರ ಆಶೋತ್ತರಗಳನ್ನು ಅತಿ ಹೆಚ್ಚು ಹಣ ನೀಡುವವರಿಗೆ ಹರಾಜು ಹಾಕಲಾಗಿದೆ. ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು "ಕೋಚಿಂಗ್ ಮಾಫಿಯಾ"ದ ಕೈಗೊಂಬೆಯಂತೆ ವರ್ತಿಸುತ್ತಿರುವುದು ಇಡೀ ವ್ಯವಸ್ಥೆಯ ಹದಗೆಟ್ಟ ಸ್ಥಿತಿಯನ್ನು ತೋರಿಸುತ್ತಿದೆ. ಈ ವ್ಯವಸ್ಥೆಯು ವಿದ್ಯಾರ್ಥಿಗಳಲ್ಲಿ ತೀವ್ರ ಆತಂಕ ಮತ್ತು ಹತಾಶೆಯನ್ನು ಮೂಡಿಸಿದೆ. ಕೇವಲ ಕೆಲವರ ಲಾಭಕ್ಕಾಗಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ನಾಶಪಡಿಸುತ್ತಿರುವುದು ಖಂಡನೀಯ ಎಂದರು. ಪ್ರತಿಭಟನೆಯಲ್ಲಿ ಜಿಲ್ಲಾ ಉಪಾಧ್ಯಕ್ಷೆ ಸ್ವಾತಿ ಇತರರು ಭಾಗವಹಿಸಿದ್ದರು.

## ಚಿರತೆ ಸೆರೆಗೆ ಇಲಾಖೆ ಕೂಂಬಿಂಗ್




ಹನೂರು: ತಾಲ್ಲೂಕಿನ ಮಲೆ ಮಹದೇಶ್ವರ ಬೆಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಇಂಡಿಗನತ್ತ ಬಳಿ ಬಾಲಕನನ್ನು ಪಡೆದ ಚಿರತೆ ಸೆರೆಗೆ ಅರಣ್ಯ ಇಲಾಖೆ ಕೂಂಬಿಂಗ್ ನಡೆಸುತ್ತಿದ್ದು, 30ಕ್ಕೂ ಅಧಿಕ ಮಂದಿ ಈ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ.

ಚಿರತೆ ಸೆರೆ ಕಾರ್ಯಾಚರಣೆ ಒಂದೆಡೆಯಾದರೇ ಚಿರತೆಯೊಂದು ಎರಡು ಮೇಕೆಗಳನ್ನು ಹೊತ್ತೊಯ್ದ ಘಟನೆ ಸೋಮವಾರ ರಾತ್ರಿ ನಾಗಮಲೆ ಗ್ರಾಮದಲ್ಲಿ ನಡೆದಿದೆ. ಕುಳಿಯಮ್ಮ ಮತ್ತು ಗೌರಿ ಎಂಬುವರಿಗೆ ಸೇರಿದ ಎರಡು ಮೇಕೆಗಳನ್ನು ಹೊತ್ತೊಯ್ದಿದ್ದು ಸ್ಥಳೀಯ ನಿವಾಸಿಗಳು ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ. ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ಕೊಟ್ಟು ಸೂಕ್ತ ಕ್ರಮ ಕೈಗೊಳ್ಳುವಂತೆ ಗೌರಿ ಮತ್ತು ಕುಳಿಯಮ್ಮ ಒತ್ತಾಯಿಸಿದ್ದಾರೆ.

## ಜಾತ್ರಾ ಸಮಯದಲ್ಲಿ ಮಾತ್ರ ಮ.ಬೆಟ್ಟಕ್ಕೆ ಪಾದಯಾತ್ರೆ

ಚಾಮರಾಜನಗರ, ನಾಗಮಲೆಯಲ್ಲಿ ಚಿರತೆ ದಾಳಿಯಿಂದ ಬಾಲಕ ಮೃತಪಟ್ಟ ಹಿನ್ನೆಲೆಯಲ್ಲಿ ಮಹದೇಶ್ವರ ಬೆಟ್ಟಕ್ಕೆ ಶಿವರಾತ್ರಿ, ಯುಗಾದಿ ಜಾತ್ರೆ ವೇಳೆ ಮಾತ್ರವೇ ಕಾಲ್ನಡಿಗೆಯಲ್ಲಿ ಸಾಗಲು ಅವಕಾಶ ನೀಡವಂತೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ನಿರ್ದೇಶನ ನೀಡಿದ್ದಾರೆ.



ವಿಕಾಸಸೌಧದಲ್ಲಿ ಹಿರಿಯ ಅಧಿಕಾರಿಗಳು ಹಾಗೂ ಚಾಮರಾಜನಗರ ಅರಣ್ಯಾಧಿಕಾರಿಗಳೊಂದಿಗೆ ವರ್ಚುವಲ್ ಸಭೆ ನಡೆಸಿದ ಅವರು, ನಾಗಮಲೆಗೆ 14 ಕಿ.ಮೀ. ನಡೆದು ಹೋಗಲು ಅವಕಾಶ ನೀಡದೆ, ಕೇವಲ 3 ಕಿ.ಮೀ. ಮಾತ್ರ ಅವಕಾಶ ನೀಡಿ, ವಾಕಿಟಾಕಿ ಮತ್ತು ಅಗತ್ಯ ಸುರಕ್ಷತಾ ಸಲಕರಣೆಯೊಂದಿಗೆ ಮಾರ್ಗದರ್ಶಕರ (ಗೈಡ್) ಸೇವೆ ಒದಗಿಸುವಂತೆ ತಿಳಿಸಿದರು. ಟಿಕೆಟ್ ಕೌಂಟರ್ ಬಳಿಯಿಂದ ನಾಗಮ ಲೆಯ ಭಕ್ತರು ಜೀಪ್?ನಲ್ಲಿ ಹೋಗುವುದನ್ನು ಕಡ್ಡಾಯ ಮಾಡಬೇಕು. ಉಳಿದ 3 ಕಿ.ಮೀ. ದುರ್ಗಮ ಅರಣ್ಯದ ಸಂಚಾರ ಪಥದ ಎರಡೂ ಬದಿಯಲ್ಲಿ ವನ್ಯಮೃಗಗಳು ಕಾಣುವಂತೆ ಕಳೆ ತೆಗೆಯುವಂತೆ ಸೂಚಿಸಿದರು.

> ವಿಕಾಸಸೌಧದಲ್ಲಿ ಹಿರಿಯ ಅಧಿಕಾರಿಗಳು ಹಾಗೂ ಚಾಮರಾಜನಗರ ಅರಣ್ಯಾಧಿಕಾರಿಗಳೊಂದಿಗೆ ವರ್ಚುವಲ್ ಸಭೆ ನಡೆಸಿದ ಸಚಿವ ಈಶ್ವರ್ ಖಂಡ್ರೆ

ಅದೇ ರೀತಿ ಮಾದಪ್ಪನ ದರ್ಶನಕ್ಕೆ 7 ಕಿ.ಮೀ. ಬೆಟ್ಟ ಹತ್ತಿ ಹೋಗಲು ವರ್ಷವಿಡೀ ಅವಕಾಶ ನೀಡದೆ ಭಕ್ತರ ಸುರಕ್ಷತೆಯ ದೃಷ್ಟಿಯಿಂದ ಕೇವಲ ಶಿವರಾತ್ರಿ ಮತ್ತು ಯುಗಾದಿ ಸಂದರ್ಭದಲ್ಲಿ ಮಾತ್ರವೇ ಅವಕಾಶ ನೀಡಿ, ಆ ಸಂದರ್ಭದಲ್ಲಿ ಹೆಚ್ಚಿನ ಅರಣ್ಯ ಸಿಬ್ಬಂದಿಯನ್ನು ಭಕ್ತರ ಸುರಕ್ಷತೆಗಾಗಿ ನಿಯೋಜಿಸುವಂತೆ ಅವರು ಸೂಚಿಸಿದರು. ಮಲೆ ಮಹದೇಶ್ವರ ಬೆಟ್ಟದ ಮೆಟ್ಟಿಲುಗಳ ಬಳಿ ಮತ್ತು ಟಿಕೆಟ್ ಕೌಂಟರ್ ಬಳಿ ಫಲಕಗಳನ್ನು ಹಾಕಿ, ಆನೆ, ಚಿರತೆ, ಹುಲಿ ಸೇರಿದಂತೆ ವನ್ಯಮೃಗಗಳಿವೆ. ಬಸ್ ಸೌಲಭ್ಯ ಬಳಸಿಕೊಂಡು ಹೋಗುವುದು ಉತ್ತಮ ಎಂಬ ಜಾಗೃತಿ ಮೂಡಿಸಲೂ ಸಲಹೆ ನೀಡಿದರು. ಸಭೆಯಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್, ಇಲಾಖೆಯ ಪ್ರಧಾನ ಕಾರ್ಯದರ್ಶಿ ಮನೋಜ್ ಕುಮಾರ್, ಎಪಿಸಿಸಿಎಫ್ (ವನ್ಯಜೀವಿ) ಬಿಸ್ವಜಿತ್ ಮಿಶ್ರಾ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಾಲತಿ ಪ್ರಿಯಾ ಮತ್ತಿತರರು ಹಾಜರಿದ್ದರು.



## ವಿದ್ಯುತ್ ದೀಪಗಳನ್ನು ದುರಸ್ತಿ ಪಡಿಸಿ

ಗುಂಡ್ಲುಪೇಟೆ: ಪಟ್ಟಣದ ಮೈಸೂರು–ಊಟಿ ಹಾಗೂ ಸುಲ್ತಾನ್ ಬತ್ತೇರಿ ರಸ್ತೆಯ ಮಧ್ಯ ಭಾಗದಲ್ಲಿರುವ ವಿದ್ಯುತ್ ದೀಪಗಳನ್ನು ದುರಸ್ತಿ ಪಡಿಸುವಂತೆ ಒತ್ತಾಯಿಸಿ ಕರ್ನಾಟಕ ಕಾವಲು ಪಡೆಯ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಿದರು.


ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು ಎಂಡಿಸಿಸಿ ಬ್ಯಾಂಕ್ ಮುಂಭಾಗ ರಸ್ತೆ ತಡೆದು ಅಧಿಕಾರಿಗಳಿಗೆ ದಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ತಾಲೂಕು ಕಚೇರಿ ಮುಂಭಾಗ ಜಮಾವಣೆಗೊಂಡರು.

ಈ ವೇಳೆ ಕಾವಲು ಪಡೆಯ ತಾಲೂಕು ಅಧ್ಯಕ್ಷ ಎ.ಅಬ್ದುಲ್ ಮಾಲಿಕ್ ಮಾತನಾಡಿ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಿದ್ಯುತ್ ದೀಪ ದುರಸ್ತಿ ಮಾಡದೇ ಇರುವುದು ಪಾದಚಾರಿಗಳಿಗೆ ತುಂಬಾ ತೊಂದರೆಯಾಗುತ್ತಿದ್ದರೂ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ದುರಸ್ತಿಗೆ ಮುಂದಾಗುತ್ತಿಲ್ಲ ಎಂದು ಕಿಡಿಕಾರಿದರು.

ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಕೂಡಲೇ ವಿದ್ಯುತ್ ದೀಪಗಳು ಸರಿಪಡಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟದ ಎಚ್ಚರಿಕೆಗೆ ಮುಂದಾಗಬೇಕಾಗುತ್ತದೆ ಎಂದರು.

ಈ ವೇಳೆ ತಹಸೀಲ್ದಾರ್ ತನ್ಮಯ್ ಗೆ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿದ ದಂಡಾಧಿಕಾರಿಗಳು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ಕೂಡಲೇ ಕ್ರಮ ಕೈಗೊಳ್ಳುವಂತೆ ಸೂಚಿಸಿದರು,

ಪ್ರತಿಭಟನೆಯಲ್ಲಿ ಕಾವಲು ಪಡೆಯ ತಾಲೂಕು ಗೌರವಾಧ್ಯಕ್ಷ ರಾಮೇಗೌಡ, ಕಾರ್ಯದರ್ಶಿ ಎಸ್. ಮುಬಾರಕ್, ಉಪಾಧ್ಯಕ್ಷ ಶಿವಕುಮಾರ್, ಟೌನ್ ಉಪಾಧ್ಯಕ್ಷ ಸಾದಿಕ್ ಪಾಷ, ಜಾಕಿರ್ ಹುಸೇನ್, ವಾಸು, ಆಚಾರ್, ಆಸೀಫ್, ಕರೀಮ್, ಮುಂಟೀಪುರ ಮಾದಯ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



### ಮೇಲುಕಾಮನಹಳ್ಳಿ ಮುರಾರ್ಜಿ ವಸತಿ ಶಾಲೆಯಲ್ಲಿ ಆಯೋಜನೆ

## 9ದಿನಗಳ ಶೈಕ್ಷಣಿಕ ಕಲಿಕಾ ಶಿಬಿರ ಕಾರ್ಯಕ್ರಮ

ಗುಂಡ್ಲುಪೇಟೆ:– ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಮಾತ್ರವಲ್ಲದೆ ಜೀವನದ ಸಾರವನ್ನು ತಿಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಚಾಮರಾಜನಗರ ಸುವರ್ಣ ಗಂಗೋತ್ರಿ ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ. ಎಂ.ಅರ್. ಗಂಗಾಧರ್ ತಿಳಿಸಿದರು.

ಮೇಲುಕಾಮನಹಳ್ಳಿ ಮುರಾರ್ಜಿ ವಸತಿ ಶಾಲೆಯಲ್ಲಿ ಚಾಮರಾಜನಗರ ವಿಶ್ವವಿದ್ಯಾನಿಲಯ ಸುವರ್ಣ ಗಂಗೋತ್ರಿ ಚಾಮರಾಜನಗರ ಸಮಾಜ ಕಾರ್ಯ ವಿಭಾಗದ ವತಿಯಿಂದ 9ದಿನಗಳ ಶೈಕ್ಷಣಿಕ ಕಲಿಕಾ ಶಿಬಿರ ಹಮ್ಮಿಕೊಂಡಿದ್ದು ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇಲ್ಲಿ ಎಲ್ಲರೂ ಒಂದೇ, ನಾನು ನೀನು ಎನ್ನುವ ಭೇದಭಾವಕ್ಕೆ ಅವಕಾಶವಿಲ್ಲ. ಪರಸ್ಪರ ಸಹಕಾರಿ ಮನೋಭಾವ ರೂಪಿಸಿಕೊಳ್ಳಲು ಬಹಳ ಮುಖ್ಯ ಎಂದು ತಿಳಿಸಿದರು.

ವಿದ್ಯಾರ್ಥಿಗಳಿಗೆ ಗ್ರಾಮ ಜೀವನ, ಹೊಂದಾಣಿಕೆಯ ಜೀವನ ಹಾಗು ಸರಳ ಜೀವನದ ಮಹತ್ವವನ್ನು ತಿಳಿಸುತ್ತದೆ. ವಿದ್ಯಾರ್ಥಿಗಳು ಶೈಕ್ಷಣಿಕ ಕಲಿಕಾ ಶಿಬಿರದಲ್ಲಿ ಕಳೆಯುವ ದಿನಗಳು ಬಹಳ ಪ್ರಮುಖವಾದುದು.



ನನಗಲ್ಲ ನಿನಗೆ ಎನ್ನುವ ಧ್ಯೇಯದೊಡನೆ ಸರ್ವರನ್ನೂ ಸಮಾನವಾಗಿ ಕಾಣುವ ಮನೋಭಾವವನ್ನು ಹುಟ್ಟು ಹಾಕುವ ಇಂತಹ ಶಿಬಿರಗಳು ನಡೆಯುತ್ತಲೇ ಇರಬೇಕು ಎಂದರಲ್ಲದೆ, ವಿದ್ಯಾರ್ಥಿಗಳು ಶೈಕ್ಷಣಿಕ ವಿಚಾರಗಳ ಜೊತೆಗೆ ಇಂತಹ ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸಲು ಮನಸ್ಸು ಮಾಡಬೇಕು ಎಂದು ತಿಳಿಸಿದರು.

ಸಾಹಿತಿ ಕಾಳಿಂಗ ಸ್ವಾಮಿ ಸಿದ್ದಾರ್ಥ್ ಮಾತನಾಡಿ ಹಾಡಿಗಳಲ್ಲಿ ಇರುವ ಜನರ ಜೀವನ ಮತ್ತು ಅವರ ಸ್ಥಿತಿಗಳ ಬಗ್ಗೆ ಶಿಬಿರಾರ್ಥಿಗಳಿಗೆ ತಿಳಿಸಿಕೊಟ್ಟರು

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾದ ಕೈಲಾಸ್ ಸತ್ಯಾರ್ಥಿ ಚಿಲ್ಡ್ರನ್ ಫೌಂಡೇಶನ್.ಜಿ. ಸಿ ನಾರಾಯಣಸ್ವಾಮಿ, ಪ್ರೊ. ಕೆ.ಎಂ. ಮಹದೇವನ್, ಕಾರ್ಮಿಕ ಇಲಾಖೆ ಅಧಿಕಾರಿ ನಾರಾಯಣ ಮೂರ್ತಿ. ಗೋಪಾಲಸ್ವಾಮಿ ಬೆಟ್ಟದ ವಲಯ ಅರಣ್ಯಾಧಿಕಾರಿ ರಾಜೀವ್ .ಎನ್, ಮುರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ, ವಿಶಾಲ್ ಜೋಗನ್ನ, ಶಿಬಿರದ ಸಂಯೋಜಕ ಜಾಮರಾಜು.ಎನ್. ಪಿ, ವಾಣಿಶ್ರೀ. ವಿ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

## ಸಂಕ್ಷಿಪ್ತ ಸುದ್ದಿ

### ಪ್ರಗತಿ ಪರಿಶೀಲನಾ ಸಭೆ

**ಮೈಸೂರು:** ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ರಾಮಪ್ಪ ಎಂ ಅವರು ಮೈಸೂರು ಜಿಲ್ಲೆಗೆ ಭೇಟಿ ನೀಡಲಿದ್ದು, ನಿಗಮದ ವಿವಿಧ ಯೋಜನೆಗಳ ಪ್ರಗತಿ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯನ್ನು ಮೇ 26 ರಂದು ಬೆಳಗ್ಗೆ 11.00 ಗಂಟೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಏರ್ಪಡಿಸಲಾಗುತ್ತದೆ ಎಂದು ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿದ್ಯುತ್ ವ್ಯತ್ಯಯ

**ಮೈಸೂರು:** ವಿ.ವಿ. ಮೊಹಲ್ಲಾ ಉಪ ವಿಭಾಗ ವ್ಯಾಪ್ತಿಯ 11 ಕೆ.ವಿ ಮಯೂರ ಹಾಗೂ 11 ಕೆ.ವಿ ಆರ್ಕೋಲಾಜಿ ವಿದ್ಯುತ್ ಮಾರ್ಗದಲ್ಲಿ ಭೂಗತ ಕೇಬಲ್ ಕೆಲಸದ ನಿಮಿತ್ತ ಮೇ 14 ರಂದು ಬೆಳಗ್ಗ 10:00 ಗಂಟೆಯಿಂದ ಸಂಜೆ 5:00 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು: ಕರ್ನಾಟಕ ಬ್ಯಾಂಕ್, ಸಂಕ್ರಾತಿ ವೃತ್ತ ಸುತ್ತಮುತ್ತ, ಗೋಲ್ಡನ್ ಬೇಕರಿ ವೃತ್ತ, ನಿಸರ್ಗ ಲೇಔಟ್, ಚೆನ್ನಮ್ಮ ವೃತ್ತ, ಮಿಲಿಟರಿ ಕ್ವಾರ್ಟ್ರಸ್, ಬಸವಮಾರ್ಗ, ಕೆ.ಐ.ಎ.ಡಿ.ಬಿ ಲೇಔಟ್, ಹೆಬ್ಬಾಳ್ 2ನೇ ಹಂತ, ಮಯೂರ ವೃತ್ತ, ಕಾವೇರಿ ವೃತ್ತ ಎಂ.ಜಿ. ಕೊಪ್ಪಲು, ಅಕ್ಷರ ಪಾಠಶಾಲಾ, ಯಲ್ಲಮ್ಮ ದೇವಸ್ಥಾನ, ಗಣಪತಿ ದೇವಸ್ಥಾನ, ಧ್ಯಾನ ಶಾಲೆ ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾ.ವಿ.ಸ.ನಿ.ನಿ. ವಿ.ವಿ. ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿದ್ಯುತ್ ವ್ಯತ್ಯಯ

**ಮೈಸೂರು:** 220/66/11 ಕೆ.ವಿ ವಾಜಮಂಗಲ ವಿದ್ಯುತ್ ವಿತರಣಾ ಕೇಂದ್ರ ಹಾಗೂ 66/11 ಕೆ.ವಿ ಮಂಡಕಳ್ಳಿ ವಿದ್ಯುತ್ ವಿತರಣಾ ಕೇಂದ್ರಗಳ ವ್ಯಾಪ್ತಿಯಲ್ಲಿ ಕ.ವಿ.ಪ್ರ.ನಿ.ನಿ ವತಿಯಿಂದ ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿ ಕೆಲಸದ ನಿಮಿತ್ತ ಮೇ 15 ರಂದು ಬೆಳಿಗ್ಗೆ 10:00 ರಿಂದ ಸಂಜೆ 6:00 ಘಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವಾಜಮಂಗಲ ವಿ.ವಿ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿರುವ ಮುಖ್ಯ ಪ್ರದೇಶಗಳು: ಹಾರೋಹಳ್ಳಿ, ಮೆಲ್ಲಹಳ್ಳಿ, ಗಳಿಗರಹುಂಡಿ, ಶಿವಪುರ, ಲಕ್ಷ್ಮಿ?ಮೀಪುರ, ಹಲಗಯ್ಯನಹುಂಡಿ, ಎ.ಟಿ.ಎಂ.ಇ ಕಾಲೇಜು, ಹೆಚ್.ಎನ್.ಕೆ ಇಂಡಸ್ಟ್ರೀಸ್, ಬನ್ನೂರು ಮುಖ್ಯ ರಸ್ತೆ, ಟಿ. ನರಸೀಪುರ ಮುಖ್ಯ ರಸ್ತೆ, ನಾಡನಹಳ್ಳಿ, ಭುಗತಹಳ್ಳಿ, ವಾಜಮಂಗಲ, ವರುಣ, ದಂಡಿಕೆರೆ, ಪಿಲ್ಲಹಳ್ಳಿ, ಚಿಕ್ಕಹಳ್ಳಿ, ಚೋರನಹಳ್ಳಿ, ಯಾಂದಳ್ಳಿ, ವರಕೋಡು, ಮೋಸಂಬಾಯನಹಳ್ಳಿ, ಬಡಗಲಹುಂಡಿ, ಕೆಂಪೇಗೌಡನಹುಂಡಿ, ಈಗಲ್ ಬರ್ಗ್ ಬಡಾವಣೆ, ವಸಂತನಗರ, ಪ್ರಕೃತಿ ಬಡಾವಣೆ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಶಾಂತವೇರಿ ಗೋಪಾಲಗೌಡ ನಗರ, ಜೆ.ಎಸ್.ಎಸ್ ಬಡಾವಣೆ 2ನೇ ಹಂತ, ಪೊಲೀಸ್ ಬಡಾವಣೆ 3ನೇ ಹಂತ, ಬಿ.ಎಂ.ಎಲ್ ಬಡಾವಣೆ, ಸಪ್ತಮಾತೃಕ ಬಡಾವಣೆ, ಹೋಟೆಲ್ ಯತಿನ್, ಮೈ–ಸೆಮ್ ಕಾಲೇಜು, ವಿ.ಟಿ.ಯು ರೀಜನಲ್ ಸೆಂಟರ್, ಲಲಿತಾದ್ರಿಪುರ, ಲಲಿತಾದ್ರಿನಗರ ಬಡಾವಣೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು. ಮಂಡಕಳ್ಳಿ ವಿ.ವಿ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿರುವ ಮುಖ್ಯ ಪ್ರದೇಶಗಳು: ಮಂಡಕಳ್ಳಿ, ಗೆಜ್ಜಗಳ್ಳಿ ಐ.ಪಿ ಪ್ರದೇಶ, ಉತ್ತನಹಳ್ಳಿ ಗ್ರಾಮ, ಶ್ರೀನಗರ, ರೇಷ್ಮೆನಗರ, ಟೇರಸ್ ಕಾಲೋನಿ, ಮಹಾಲಕ್ಷ್ಮಿ ಮ ಬಡಾವಣೆ, ಆರ್.ಕೆ ಬಡಾವಣೆ, ಭವಾನಿ ಬಡಾವಣೆ, ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾ.ವಿ.ಸ.ನಿ.ನಿ. ನ.ರಾ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ವಿದ್ಯುತ್ ವ್ಯತ್ಯಯ;** ಮೈಸೂರು ಮೇ. 13 (ಕರ್ನಾಟಕ ವಾರ್ತೆ):– 66/11 ಕೆ.ವಿ ರಾಜೀವ್‌ನಗರ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಯಲ್ಲಿ ಕ.ವಿ.ಪ್ರ.ನಿ.ನಿ ವತಿಯಿಂದ ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿ ಕೆಲಸದ ನಿಮಿತ್ತ ಮೇ 14 ರಂದು ಬೆಳಿಗ್ಗೆ 10:00 ರಿಂದ ಸಂಜೆ 5:00 ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವಿದ್ಯುತ್ ವ್ಯತ್ಯಯವಾಗಲಿರುವ ಮುಖ್ಯ ಪ್ರದೇಶಗಳು: ಡಿ.ಟಿ.ಎಸ್ ರಾವ್ ನಗರ, ಸಾತಗಳ್ಳಿ, ಕಲ್ಯಾಣಗಿರಿ ನಗರ, ರಾಜೀವನಗರ 2ನೇ ಹಂತ, 3ನೇ ಹಂತ, ಎನ್.ಜಿ ಕರೀಂ ಬ್ಲಾಕ್, ಗುಪ್ತಾ ಸ್ಟೋರ್, ಅಲ್–ಬದರ್ ವೃತ್ತ, ಖುಬಾ ಮಸೀದಿ, ಸೂರ್ಯನಾರಾಯಣ ದೇವಸ್ಥಾನ ರಸ್ತೆ, ದಸ್ತಗೀರ್ ಫಂಕ್ಷನ್ ಹಾಲ್, ಕ್ರಿಷ್ಟಿಯನ್ ಕಾಲೋನಿ, ನಾಗರಾಜಪ್ಪ ಬಡಾವಣೆ, ಸದಾನಂದ ಆಸ್ಪತ್ರೆ, ರೇಷಮ್ ಉದ್ಯೋಗ್ ಬಡಾವಣೆ, ನಾರಾಯಣ ಹೃದಯಾಲಯ ಆಸ್ಪತ್ರೆ, ಪ್ರಜ್ವಲ್ ಆಸ್ಪತ್ರೆ, ಖಖಿಔ –55, ಡಾರ?ಸ್ ಕಾಲೋನಿ, ಆಶಿಯಾನ ಬಡಾವಣೆ, ಅಬ್ದುಲ್ ಕಲಾಂ ಬಡಾವಣೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾ.ವಿ.ಸ.ನಿ.ನಿ. ನ.ರಾ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತಾಯಿ ಎದೆ ಹಾಲಿನ ಕೇಂದ್ರ ಉದ್ಘಾಟನೆಯ ಪೂರ್ವಸಿದ್ದತೆ ಪರಿಶೀಲನೆ




**ಮಂಡ್ಯ:** ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ನಿರ್ಮಾಣ ಮಾಡಲಾಗಿರುವ ತಾಯಿ ಎದೆ ಹಾಲಿನ ಕೇಂದ್ರ ಮತ್ತು ಎಂ.ಎಲ್.ಸಿ.ಯು. ಅನ್ನು ಮೇ 13ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಉದ್ಘಾಟಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಮಿಮ್ಸ್ ಗೆ ಭೇಟಿ ನೀಡಿ ಕಾರ್ಯಕ್ರಮದ ಪೂರ್ವ ಸಿದ್ದತೆಗಳನ್ನು ಜಿ.ಪಂ. ಸಿಇಓ ನಂದಿನಿ ಕೆ.ಆರ್. ಪರಿಶೀಲಿಸಿದರು.

ಮಂಗಳವಾರ ಮಿಮ್ಸ್ ಗೆ ಬೇಟಿ ನೀಡಿದ ಅವರು, ತಾಯಿ ಎದೆ ಹಾಲಿನ ಕೇಂದ್ರ, ಎಂ.ಎಲ್.ಸಿ.ಯು.ಗಳನ್ನು ಉದ್ಘಾಟನೆ ಸಂಬಂಧ ತೆಗೆದುಕೊಳ್ಳಲಾಗಿರುವ ಕ್ರಮಗಳ ಕುರಿತು ಹಾಗೂ ಸಿದ್ದತೆಗಳನ್ನು ಪರಿಶೀಲಿಸಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

ಕಾರ್ಯಾಗಾರ ಆಯೋಜನೆ: ತಾಯಿ ಎದೆ ಹಾಲಿನ ಕೇಂದ್ರ ಮತ್ತು ಎಂ.ಎಲ್.ಸಿ.ಯು. ಉದ್ಘಾಟನೆಯ ನಂತರ ಸದರಿ ಘಟಕಗಳ ಕಾರ್ಯನಿರ್ವಹಣೆಯ ಬಗ್ಗೆ ಕಾರ್ಯಾಗಾರವನ್ನು ಏರ್ಪಡಿಸಲಾಗಿದ್ದು, ನುರಿತ ತಜ್ಞ ವೈದ್ಯರು ಹಾಗೂ ಸಿಬ್ಬಂದಿಗಳು ತಮ್ಮ ಅನುಭವ ಹಂಚಿಕೊಳ್ಳಲಿದ್ದು, ಜಿಲ್ಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗರ್ಭಿಣಿ ಮತ್ತು ಸ್ತ್ರೀ ರೋಗ ತಜ್ಞರು ಗಳು ಮತ್ತು ಸದರಿ ವಿಭಾಗದ ಸಿಬ್ಬಂದಿಗಳು ಹಾಗೂ ಮಿಮ್ಸ್ ನ ಓಬಿಜಿ ವಿಭಾಗದ ಎಲ್ಲಾ ವೈದ್ಯರು ಮತ್ತು ಸಿಬ್ಬಂದಿಗಳು ಭಾಗವಹಿಸಿ ಮಾಹಿತಿ ಪಡೆಯಲು ಸೂಚಿಸಲಾಗಿದೆ ಎಂದು ತಿಳಿಸಿದರು.

ನುರಿತ ಸಿಬ್ಬಂದಿಗಳ ನಿಯೋಜನೆ: ತಾಯಿ ಎದೆ ಹಾಲಿನ ಕೇಂದ್ರ ಮತ್ತು ಎಂ.ಎಲ್.ಸಿ.ಯು. ಗೆ ನುರಿತ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಸದರಿ ಸಿಬ್ಬಂಧಿಗಳು 18 ತಿಂಗಳ ತರಬೇತಿ ಪಡೆದಿದ್ದು, ಈಗಾಗಲೇ 18 ಸಹಜ ಹೆರಿಗೆಗಳನ್ನು ಮಾಡಿಸಿದ ಅನುಭವವನ್ನು ಹೊಂದಿದ್ದಾರೆ ಎಂದು ತಿಳಿಸಿದರು.

ತಾಯಿ ಎದೆ ಹಾಲಿನ ಕೇಂದ್ರ ಮತ್ತು ಎಂ.ಎಲ್.ಸಿ.ಯು. ಗಳಿಂದ ತಾಯಿ ಮರಣ ಪ್ರಮಾಣ ಮತ್ತು ಶಿಶು ಮರಣ ಪ್ರಮಾಣವನ್ನು ಕಡಿಮೆ ಮಾಡಬಹುದಾಗಿದ್ದು, ಈ ನಿಟ್ಟಿನಲ್ಲಿ ಈ ಎರಡು ಘಟಕಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸೂಕ್ತ ಕಾರ್ಯಕ್ರಮ ರೂಪಿಸಬೇಕು. ಜಿಲ್ಲೆಯಲ್ಲಿನ ಕ್ರಿಯಾ ಶೀಲ ಆಶಾ ಕಾರ್ಯಕರ್ತೆಯರಿಗೆ ಸೂಕ್ತ ತರಬೇತಿ ನೀಡಿ ನಂತರ ಎಲ್ಲಾ ಆಶಾ ಕಾರ್ಯಕರ್ತೆಯರಿಗೆ ತರಬೇತಿ ನೀಡಲು ಕ್ರಮವಹಿಸಬೇಕು ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ಮಿಮ್ಸ್ ನಿರ್ದೇಶಕರಾದ ಡಾ. ನರಸಿಂಹಸ್ವಾಮಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಮೋಹನ್, ಆರ್ ಸಿ ಹೆಚ್ ಡಾ. ಅಶ್ವತ್, ಕಾರ್ಯಕ್ರಮಾಧಿಕಾರಿ ಆಶಾಲತಾ, ಗರ್ಭಿಣಿ ಮತ್ತು ಸ್ತ್ರೀ ರೋಗ ತಜ್ಞ ಡಾ. ಮನೋಹರ್, ಮಕ್ಕಳ ತಜ್ಞ ಡಾ. ಕೀರ್ತಿ ಸೇರಿದಂತೆ ಇತರರು ಹಾಜರಿದ್ದರು.

# ಮಂಡ್ಯದಲ್ಲಿ ನೋಂದಣಿ ರಹಿತ ಎಲೆಕ್ಟ್ರಿಕ್ ವಾಹನ ಮಾರಾಟದ ದಂಧೆ

**ಸಾರ್ವಜನಿಕರ ವಂಚನೆ ಆರೋಪ**

**ಮಂಡ್ಯ:** ನಗರದಲ್ಲಿ ನೋಂದಣಿ ರಹಿತ ಎಲೆಕ್ಟ್ರಿಕ್ ವಾಹನಗಳ ಮಾರಾಟದ ಹೆಸರಿನಲ್ಲಿ ನಿಯಮಗಳನ್ನು ಉಲ್ಲಂಘಿಸಿ ಸಾರ್ವಜನಿಕರನ್ನು ವಂಚಿಸಲಾಗುತ್ತಿದೆ ಎಂದು ನಗರವಾಸಿ ನ್ ಂ ಜ ು ಂ ಡ್ ಗ್ ಂ ಬಿ ೀ ರ್ ಆ ರ್ ೂ ೀ ಪ್ ಮಾಡಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೋಂದಣಿ ಅಗತ್ಯವಿಲ್ಲದ ಕೆಲವು ಎಲೆಕ್ಟ್ರಿಕ್ ವಾಹನಗಳಿಗೆ ಸರ್ಕಾರದಿಂದ ಅವಕಾಶವಿದ್ದರೂ, ಜಿಲ್ಲೆಯಲ್ಲಿ ಅದರ ನಿಯಮಗಳನ್ನು ಮೀರಿ ಹೆಚ್ಚು ದರಕ್ಕೆ ಮಾರಾಟ ಮಾಡಲಾಗುತ್ತಿದೆ ಎಂದು ದೂರಿದರು.

ನಿಯಮಗಳ ಪ್ರಕಾರ ನೋಂದಣಿ ರಹಿತ ಎಲೆಕ್ಟ್ರಿಕ್ ವಾಹನಗಳ ಗರಿಷ್ಠ ವೇಗ 25 ಕಿ.ಮೀ. ಒಳಗೆ ಮತ್ತು ತೂಕ 60 ಕೆ.ಜಿ. ಒಳಗೆ ಇರಬೇಕು. ಆದರೆ ನಗರದಲ್ಲಿ 45 ರಿಂದ 60 ಕಿ.ಮೀ. ವೇಗದಲ್ಲಿ ಸಂಚರಿಸುವ ಹಾಗೂ 120 ಕೆ.ಜಿ. ವರೆಗೆ ತೂಕ ಹೊಂದಿರುವ ವಾಹನಗಳನ್ನು ಅಧಿಕ ಬೆಲೆಗೆ ಮಾರಾಟ ಮಾಡಲಾಗುತ್ತಿದೆ ಎಂದು ಅವರು ಹೇಳಿದರು.

ಇದನ್ನು ಕೆಲವರು ಚೈನ್‌ಲಿಂಕ್ ದಂಧೆಯಾಗಿ ಮಾಡಿಕೊಂಡು ಹಣ ಗಳಿಸುವ ಮಾರ್ಗವಾಗಿ ಬಳಸುತ್ತಿದ್ದಾರೆ. ಈ ಬಗ್ಗೆ ಜಿಲ್ಲೆಯ ಪ್ರಾದೇಶಿಕ ಸಾರಿಗೆ?ಧಿಕಾರಿಗೆ (ಆರ್‌ಟಿಓ) ದೂರು ನೀಡಿದರೂ ತಿಂಗಳಾದರೂ ಸಮರ್ಪಕ ಕ್ರಮ ಕೈಗೊಂಡಿಲ್ಲ. ಪ್ರಶ್ನಿಸಿದ ನಂತರ ಕೇವಲ ಒಂದು ವಾಹನವನ್ನು ಜಪ್ತಿ ಮಾಡಿರುವುದು ನೆಪಮಾತ್ರ ಕ್ರಮ ಎಂದು ಅವರು ಆರೋಪಿಸಿದರು.

ನಗರದಲ್ಲಿ ಇಂತಹ 100ಕ್ಕೂ ಹೆಚ್ಚು ವಾಹನಗಳು ಸಂಚರಿಸುತ್ತಿದ್ದು, ಅವುಗಳಿಗೆ ಅಪಘಾತ ಸಂಭವಿಸಿದರೆ ಯಾವುದೇ ವಿಮಾ ಸೌಲಭ್ಯ ಲಭ್ಯವಿರುವುದಿಲ್ಲ ಎಂಬ ಅರಿವು ಇಲ್ಲದೆ ಜನರು ಬಳಸುತ್ತಿದ್ದಾರೆ ಎಂದು ಹೇಳಿದರು.

ಈ ದಂಧೆ ಮುಂದುವರೆದರೆ ಅಪ್ರಾಪ್ತ ಮಕ್ಕಳ ಕೈಗೆ ಈ ವಾಹನಗಳು ಸಿಗುವ ಸಾಧ್ಯತೆ ಇದ್ದು, ಜೀವಹಾನಿ ಸಂಭವಿಸುವ ಭೀತಿ ಇದೆ. ಆದ್ದರಿಂದ ಸಂಬಂಧಿತ ಅಧಿಕಾರಿಗಳು ತಕ್ಷಣವೇ ಕ್ರಮ ಕೈಗೊಂಡು ಈ ಅನಧಿಕೃತ ಮಾರಾಟಕ್ಕೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

## ವಾಲ್ಮೀಕಿ ನಾಯಕರ ಸಂಘಕ್ಕೆ ನಿವೇಶನ ಮಂಜೂರಿಗೆ ಮನವಿ

**ಕೆ.ಆರ್.ನಗರ:** ಸಾಲಿಗ್ರಾಮ ತಾಲ್ಲೂಕು ವಾಲ್ಮೀಕಿ ನಾಯಕರ ಸಂಘಕ್ಕೆ ನಿವೇಶನ ಒದಗಿಸುವಂತೆ ಸಂಘದ ಅಧ್ಯಕ್ಷ ಸಿ.ಸಿ. ಮಹದೇವ್ ಅವರು ಸತೀಶ್ ಜಾರಕಿಹೊಳಿ ಅವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಿದರು.



ಈ ಸಂದರ್ಭದಲ್ಲಿ ಹಂಪಾಪುರ ದೇವರಾಜ್, ಹೆಬ್ಬಾಳು ಶಿವಕುಮಾರ್ ಹಾಗೂ ಸಚಿವರ ಕಾರ್ಯದರ್ಶಿ ನಾಗರಾಜ್ ಸೇರಿದಂತೆ ನಾಯಕ ಸಮಾಜದ ಮುಖಂಡರು ಉಪಸ್ಥಿತರಿದ್ದರು. ಸಂಘದ ಕಾರ್ಯಚಟುವಟಿಕೆಗಳಿಗೆ ಶಾಶ್ವತ ಸ್ಥಳಾವಕಾಶ ಅಗತ್ಯವಿರುವುದರಿಂದ ತ್ವರಿತವಾಗಿ ನಿವೇಶನ ಮಂಜೂರು ಮಾಡಬೇಕೆಂದು ಮನವಿಯಲ್ಲಿ ಆಗ್ರಹಿಸಲಾಯಿತು.

## ಮೇ 15 ರಂದು ವಿದ್ಯುತ್ ವ್ಯತ್ಯಯ

**ಮಂಡ್ಯ:** 66/11 ಕೆ.ವಿ ಬಿ. ಹಟ್ನ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ನಿರ್ವಹಣೆ ಹಮ್ಮಿಕೊಂಡಿರುವುದರಿಂದ ಮೇ 15 ರಂದು ಬೆಳಿಗ್ಗೆ 09 ರಿಂದ ಸಂಜೆ 6 ಗಂಟೆಯ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಬಿ. ಹಟ್ನ ವಿದ್ಯುತ್ ವಿತರಣಾ ಕೇಂದ್ರಗಳಾದ ದುದ್ದ, ಬಿ.ಹಟ್ಟ, ಬೇವಕಲ್ಲು, ಬೇವಕಲ್ಲು ಕೊಪ್ಪಲು, ಗಿಡೇಗೌಡನಕೊಪ್ಪಲು, ಕನ್ನಟ್ಟಿ, ಬಂಕನಹಳ್ಳಿ, ಛತ್ರನಹಳ್ಳಿ, ಬಿಲ್ಲೇನಹಳ್ಳಿ, ಕೊಂತೇಗೌಡನಕೊಪ್ಪಲು ಹಾಗೂ ಈ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಜಿಲ್ಲಾ ಚಾವಿಸನಿನಿ ಕಾ ಮತ್ತು ಪಾ ವಿಭಾಗ ಕಾರ್ಯನಿರ್ವಾಹಕ ಅಭಿಯಂತರರು (ವಿ) ಎಸ್.ಅನಿತಾಬಾಯಿ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 15 ದಿನದೊಳಗೆ ಸರ್ಕಾರಕ್ಕೆ ವರದಿ ಸಲ್ಲಿಕೆ: ಡಾ.ಎಲ್.ಮೂರ್ತಿ

# ಬುಡಕಟ್ಟು ಜನರ ಸಮಸ್ಯೆ ಗಂಭೀರವಾಗಿ ಪರಿಗಣಿಸಿ



**ರಾಮನಗರ:** ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗವು ಕಳೆದ ಏಳು ತಿಂಗಳಲ್ಲಿ ಬೆಂಗಳೂರು ದಕ್ಷಿಣ ಸೇರಿದಂತೆ ರಾಜ್ಯದ 15 ಜಿಲ್ಲೆಗಳಲ್ಲಿ ಅಹವಾಲು ಸ್ವೀಕರಿಸಿ ಪರಿಶೀಲನೆ ನಡೆಸಿದ್ದು, ವರದಿಯನ್ನು 15 ದಿನಗಳಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಆಯೋಗದ ಅಧ್ಯಕ್ಷ ಡಾ.ಎಲ್.ಮೂರ್ತಿ ತಿಳಿಸಿದರು.

ನಗರದ ಜಿಪಂ ಸಭಾಂಗಣದಲ್ಲಿ ನಡೆದ ಅಹವಾಲು ಸ್ವೀಕಾರ ಸಭೆಯಲ್ಲಿ ಅವರು ಮಾತನಾಡಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ ಸಮಸ್ಯೆಗಳನ್ನು ಆಲಿಸಿ, ಸಂಬಂಧಿತ ಇಲಾಖೆಗಳ ಮೂಲಕ ಪರಿಹಾರ ಕಲ್ಪಿಸಲು ಆಯೋಗ ಕ್ರಮ ಕೈಗೊಳ್ಳುತ್ತಿದೆ. ಸಲ್ಲಿಕೆಯಾದ ಅಹವಾಲುಗಳನ್ನು ಗಂಭೀರವಾಗಿ ಪರಿಶೀಲಿಸಿ ಅಧಿಕಾರಿಗಳಿಗೆ ರವಾನಿಸಲಾಗುವುದು. ಸಮಸ್ಯೆಗಳ ಕುರಿತು ಅರ್ಜಿದಾರರಿಗೆ ದೂರವಾಣಿ ಮೂಲಕ ಮಾಹಿತಿ ನೀಡಲಾಗುವುದು ಎಂದರು.

ಕಾನೂನಿನ ಮುಂದೆ ಯಾರೂ ದೊಡ್ಡವರಲ್ಲ. ಅಧಿಕಾರಿಗಳು ಜನರೊಂದಿಗೆ ಸೌಜನ್ಯದಿಂದ ವರ್ತಿಸಿ ಸಮಸ್ಯೆಗಳಿಗೆ ಸ್ಪಂದಿಸಬೇಕು. ಅಗತ್ಯವಿದ್ದಲ್ಲಿ ಆಯೋಗ ಕಾನೂನು ಕ್ರಮ ಕೈಗೊಳ್ಳಲು ಹಿಂಜರಿಯುವುದಿಲ್ಲ ಎಂದು ಎಚ್ಚರಿಸಿದರು.

ಹಲವು ಜಿಲ್ಲೆಗಳಲ್ಲಿ ಶೇ.50ರಿಂದ 60ರಷ್ಟು ಸಮಸ್ಯೆಗಳನ್ನು ಸ್ಥಳದಲ್ಲೇ ಇತ್ಯರ್ಥಪಡಿಸಲಾಗಿದೆ. ಬೆಂಗಳೂರು ದಕ್ಷಿಣ ಜಿಲ್ಲೆಯ ಸಮಸ್ಯೆಗಳೂ ಗಂಭೀರವಾಗಿದ್ದು, ಅವುಗಳ ಪರಿಹಾರಕ್ಕೆ ಆಯೋಗ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು.

ಸಭೆಯಲ್ಲಿ ಆಯೋಗದ ಸದಸ್ಯರು, ಜಿಲ್ಲಾಡಳಿತ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು. ವಿವಿಧ ಸಂಘಟನೆಗಳ ಪದಾಧಿಕಾರಿಗಳು ಮತ್ತು ಸಾರ್ವಜನಿಕರು ಅಹವಾಲು ಸಲ್ಲಿಸಿದರು.

### ಅಲೆಮಾರಿ ಜನಾಂಗದವರನ್ನು ಒಕ್ಕಲೆಬ್ಬಿಸಬೇಡಿ: ಡಾ.ಎಲ್.ಮೂರ್ತಿ

ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಸಂಬಂಧಿತ ಅಧಿಕಾರಿಗಳ ಸಮ್ಮುಖದಲ್ಲಿ ಸಭೆ ನಡೆಸಿ ಸ್ಮಶಾನ, ಪೋಡಿ, ಜಮೀನು ದಾರಿ, ಸರ್ವೆ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕು ಎಂದರು.

ಎಸ್‌ಸಿಪಿ ಹಾಗೂ ಟಿಎಸ್‌ಪಿ ಅನುದಾನವನ್ನು ಸಮರ್ಪಕವಾಗಿ ಬಳಸಿ, ಆ ಯೋಜನೆಗಳಡಿ ಕೈಗೊಳ್ಳುವ ಕಾಮಗಾರಿಗಳಿಗೆ ಕಡ್ಡಾಯವಾಗಿ ನಾಮಫಲಕ ಅಳವಡಿಸಬೇಕು ಎಂದು ಸೂಚಿಸಲಾಗಿದೆ ಎಂದು ತಿಳಿಸಿದರು.

ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಅಲೆಮಾರಿ ಜನಾಂಗದವರನ್ನು ಒಕ್ಕಲೆಬ್ಬಿಸಬಾರದು ಎಂದು ಅರಣ್ಯ ಮತ್ತು ಕಂದಾಯ ಇಲಾಖೆಗೆ ಪತ್ರ ಬರೆಯಲಾಗಿದೆ. ಪೌರ ಕಾರ್ಮಿಕರಿಗೆ ಸಮಯಕ್ಕೆ ಸರಿಯಾಗಿ ವೇತನ, ಆರೋಗ್ಯ ಮತ್ತು ವೈದ್ಯಕೀಯ ಸೌಲಭ್ಯ ಒದಗಿಸಬೇಕು ಎಂದು ಹೇಳಿದರು.

ಪರಿಶಿಷ್ಟ ಜಾತಿ ಹಾಗೂ ಪಂಗಡದ ಜನರು ಸಲ್ಲಿಸಿರುವ ಅಹವಾಲುಗಳನ್ನು ಗಂಭೀರವಾಗಿ ಪರಿಗಣಿಸಿ ಪರಿಹಾರ ನೀಡಬೇಕು. ಅರ್ಜಿಗಳ ಸ್ಥಿತಿಗತಿಯನ್ನು ಪತ್ರದ ಮೂಲಕ ಅರ್ಜಿದಾರರಿಗೆ ತಿಳಿಸಬೇಕು ಎಂದರು.

ಜಿಲ್ಲೆಯ ಕೆಲವು ಹಾಸ್ಟೆಲ್‌ಗಳಲ್ಲಿ ಆಹಾರ ಮತ್ತು ಸ್ವಚ್ಛತೆ ಕುರಿತು ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಲಾಗುವುದು ಎಂದು ಹೇಳಿದರು.

## ಜಾತಿ ಪ್ರಮಾಣ ಪತ್ರ ವಿತರಣೆಗೆ ಆದ್ಯತೆ ನೀಡಿ: ಐಶ್ವರ್ಯ ಆರ್

**ಮೈಸೂರು:** ಶಾಲಾ–ಕಾಲೇಜುಗಳ ದಾಖಲಾತಿ ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸೇರಿದಂತೆ ಇತರೆ ಜಾತಿ ಪ್ರಮಾಣ ಪತ್ರಗಳ ಅರ್ಜಿಗಳನ್ನು ಆದ್ಯತೆಯ ಮೇರೆಗೆ ವಿತರಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ತಹಶೀಲ್ದಾರ್‌ಗಳಿಗೆ ಸೂಚಿಸಿದರು.

ಡಾ.ಬಾಬು ಜಗಜೀವನ್ ರಾಂ ಸಭಾಂಗಣದಲ್ಲಿ ನಡೆದ ಜಿಲ್ಲಾ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಜಾತಿ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸುವ ವೇಳೆ ಅಗತ್ಯ ದಾಖಲೆಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದರು.

ಸಮಿತಿ ಸದಸ್ಯ ಚಿಕ್ಕ ಜವರಾಯ್ಯ ಮಾತನಾಡಿ, ಪೊಲೀಸ್ ಇಲಾಖೆಯ ಕುಂದುಕೊರತೆ ಸಭೆಗಳಿಗೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಮುಖಂಡರನ್ನು ಆಹ್ವಾನಿಸಿದರೆ ಸಮಸ್ಯೆಗಳ ಕುರಿತು ಸಮಗ್ರ ಚರ್ಚೆಗೆ ಅವಕಾಶವಾಗುತ್ತದೆ ಎಂದು ಹೇಳಿದರು.


ತಾಲ್ಲೂಕು ಮಟ್ಟದಲ್ಲಿ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಗಳನ್ನು ನಿಯಮಿತವಾಗಿ ನಡೆಸಬೇಕು ಎಂದು ಸದಸ್ಯರು ಮನವಿ ಮಾಡಿದರು.

ಮೈಸೂರು ನಗರದಲ್ಲಿನ ಕೆಲವು ವೃತ್ತ, ಬಡಾವಣೆ ಹಾಗೂ ದ್ವಾರಗಳಿಗೆ ಡಾ. ಬಿ.ಆರ್. ಅಂಬೇಡ್ಕರ್ ಅವರ ಹೆಸರು ನಾಮಕರಣ ಮಾಡುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು.

ಆಲನಹಳ್ಳಿ ಗ್ರಾಮದ ಜಮೀನು ಒತ್ತುವರಿ ಪ್ರಕರಣದ ಕುರಿತು ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಮೈಸೂರು ತಹಶೀಲ್ದಾರ್‌ಗೆ ಸೂಚಿಸಿದರು.

ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

# ಮಕ್ಕಳ ಮರಣ ಪ್ರಮಾಣ ತಗ್ಗಿಸಲು ಶಿಶು ಸಂಜೀವಿನಿ ಯೋಜನೆ ಜಾರಿ



**ಮಂಡ್ಯ:** ಕಳೆದ ಮೂರು ವರ್ಷಗಳಿಂದ ಸರ್ಕಾರ ಜನರಿಗೆ ಉತ್ತಮ ಆರೋಗ್ಯ ಸೇವೆಯನ್ನು ಕಲ್ಪಿಸಿಕೊಂಡು ಬರುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಕೃಷಿ ಸಚಿವ ಎನ್ ಚಲುವರಾಯಸ್ವಾಮಿ ಬುಧವಾರ ಹೇಳಿದರು

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಮಿಮ್ಸ್) ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಆಸ್ಪತ್ರೆಯಲ್ಲಿ ನೂತನವಾಗಿ ಸ್ಥಾಪಿಸಿರುವ ಮಿಡ್ ವೈಫರಿ ಆಧಾರಿತ ಆರೈಕೆ ಘಟಕ ಮತ್ತು ತಾಯಿ ಹಾಲು ಸಂಗ್ರಹಣಾ ಕೇಂದ್ರ (ಶಿಶು ಸಂಜೀವಿನಿ) ಘಟಕಗಳ ಉದ್ಘಾಟನಾ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು

ಕಳೆದ ಮೂರು ವರ್ಷಗಳಿಂದ ಸರ್ಕಾರ ಜನರಿಗೆ ಉತ್ತಮ ಆರೋಗ್ಯ ಸೇವೆಯನ್ನು ಕಲ್ಪಿಸಿಕೊಂಡು ಬರುತ್ತಿದೆ. ತಾಯಿ ಮಗುವಿನ ಆರೋಗ್ಯ ಕಾಪಾಡುವುದು ಮುಖ್ಯವಾಗಿದೆ. ಆರೋಗ್ಯ ಕ್ಷೇತ್ರದಲ್ಲಿ ಶಿಶು ಸಂಜೀವಿನಿ ಯೋಜನೆ ಮಹತ್ವದಾಗಿದೆ ಎಂದು ಹೇಳಿದರು.

ಶಿಶು ಸಂಜೀವಿನಿ ಯೋಜನೆಯಿಂದ ಮುಂಚಿತವಾಗಿ ಹೆರಿಗೆ ಆಗುವ ಮಕ್ಕಳಿಗೆ ಮತ್ತು ಪೌಷ್ಟಿಕಾಂಶ ಕೊರತೆಯಿರುವ ಮಕ್ಕಳಿಗೆ ಉಪಯುಕ್ತವಾಗುತ್ತದೆ. ತಾಯಿಯಂದರಿಗೆ ಹಾಲು ಸಂಗ್ರಹಿಸಿ ಇಟ್ಟುಕೊಳ್ಳುವುದರಿಂದ ಅನಾನುಕೂಲ ಉಂಟಾಗುತ್ತದೆ ಹಾಗೂ ಎದೆ ಹಾಲನ್ನು ಕೊಡುವುದರಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ತಿಳಿ ಹೇಳಬೇಕು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಇಲಾಖೆ ಮುತುವರ್ಜಿ ವಹಿಸಿ ಜಿಲ್ಲೆಯಲ್ಲಿ ತಾಯಿ ಎದೆ ಹಾಲು ಸಂಗ್ರಹ ಘಟಕವನ್ನು ಪ್ರಾರಂಭಿಸಲಾಗಿದೆ ಇದು ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು.

ಮಕ್ಕಳ ಆರೋಗ್ಯ ಕಾಪಾಡುವುದು ಮತ್ತು ಮಕ್ಕಳ ಮರಣ ಸಂಖ್ಯೆಯನ್ನು ತಪ್ಪಿಸುವ ಸದುದ್ದೇಶದಿಂದ ಶಿಶು ಸಂಜೀವಿನಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಇದರ ಉಪಯೋಗವನ್ನು ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್ ನಂದಿನಿ ಅವರು ಮಾತನಾಡಿ ತಾಯಿ ಮಗುವಿನ ಆರೋಗ್ಯ ಕಾಪಾಡುವುದು ಅತಿ ಮುಖ್ಯ. ವರದಿಗಳ ಪ್ರಕಾರ ತಾಯಿ ಮಗುವಿನ ಆರೋಗ್ಯ ಹೆಚ್ಚಿರುವ ಕಡೆ ಆರ್ಥಿಕ ಪ್ರಗತಿಯನ್ನು ನಾವು ಕಾಣಬಹುದು. ಜಿಲ್ಲಾಯಲ್ಲಿ ಸಂಭವಿಸುವ ತಾಯಿ ಮಗುವಿನ ಮರಣದ ಬಗ್ಗೆ ತಜ್ಞ ವೈದ್ಯರ ವರದಿಯ ಕುರಿತು ಪ್ರತಿಯೊಂದು ಪ್ರಕರಣಕ್ಕೂ ಒಂದು ಗಂಟೆಗೂ ಹೆಚ್ಚುಕಾಲ ಸಭೆ ನಡೆಸಲಾಗುತ್ತದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ತಾಯಿ ಮಗುವಿನ ಮರಣವನ್ನು ತಡೆಗಟ್ಟಲು ಶಿಶು ಸಂಜೀವಿನಿ ಯೋಜನೆ ತರಲಾಗಿದೆ. ತಾಯಿಯ ಎದೆ ಹಾಲಿಗಿಂತ ಸರ್ವ ಶ್ರೇಷ್ಠ ಉಡುಗೊರೆ ಮತ್ತೊಂದಿಲ್ಲ. ಜಿಲ್ಲೆಯ ಎಲ್ಲಾ ಶಾಸಕರುಗಳು ಮಿಡ್ ವೈಫರಿ ಆಧಾರಿತ ಆರೈಕೆ ಘಟಕ ಮತ್ತು ತಾಯಿ ಹಾಲು ಸಂಗ್ರಹಣ ಕೇಂದ್ರ ಘಟಕ ನಿರ್ಮಾಣಕ್ಕೆ ಹೆಚ್ಚಿನ ಸಹಕಾರ ನೀಡಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಸಭೆಯಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ರವಿಕುಮಾರ್, ಜಿಲ್ಲಾಧಿಕಾರಿ ಡಾ. ಕುಮಾರ, ಮಿಮ್ಸ್ ನಿರ್ದೇಶಕ ನರಸಿಂಹಸ್ವಾಮಿ, ಮುಡಾ ಅಧ್ಯಕ್ಷ ಪ್ರಕಾಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಅನಾಥ ಶವಗಳ ಆಶಾಕಿರಣ: ಶರೀಫ್ ಚಾಚಾ"



ಡಾ.ಸುಧಾಕರ.ಜಿ.ಲಕ್ಕವಳ್ಳಿ

**ಸ್ಫೂರ್ತಿ ಸುಧೆ - 19**

ಜೀವನದಲ್ಲಿ ಎದುರಾಗುವ ವೈಯಕ್ತಿಕ ನೋವು ಮನುಷ್ಯನನ್ನು ಕುಗ್ಗಿಸಬಹುದು ಅಥವಾ ಮಹಾನ್ ಸಾಧಕನನ್ನಾಗಿ ಬದಲಿಸಬಹುದು. ಇದಕ್ಕೆ ಜ್ವಲಂತ ಉದಾಹರಣೆ ಅಯೋಧ್ಯೆಯ ಮೊಹಮ್ಮದ್ ಶರೀಫ್. ಇವರನ್ನು ಜಗತ್ತು ಪ್ರೀತಿಯಿಂದ ಶರೀಫ್ ಚಾಚಾ ಎಂದು ಕರೆಯುತ್ತದೆ.

ವೃತ್ತಿಯಲ್ಲಿ ಸೈಕಲ್ ಮೆಕ್ಯಾನಿಕ್ ಆಗಿದ್ದ ಶರೀಫ್ ಅವರ ಬದುಕು 1992ರಲ್ಲಿ ನಡೆದ ಒಂದು ಕಹಿ ಘಟನೆಯಿಂದ ಸಂಪೂರ್ಣವಾಗಿ ಬದಲಾಯಿತು.ತಮ್ಮ ಮಗ ಕಾಣೆಯಾಗಿ,ಅನಾಥ ಶವವಾಗಿ ಅಂತ್ಯಸಂಸ್ಕಾರಕ್ಕೊಳಗಾದ ಸಂಗತಿ ತಿಳಿದಾಗ ಅವರು ಅನುಭವಿಸಿದ ನೋವು ಅಸದಳ. ಅಂದೇ ಅವರು ಒಂದು ಕಠಿಣ ನಿರ್ಧಾರ ಮಾಡಿದರು ಯಾವುದೇ ವ್ಯಕ್ತಿಯ ಶವ ಅನಾಥವಾಗಿ ಅಂತ್ಯಸಂಸ್ಕಾರ ಕಾಣಬಾರದು.

ಕಳೆದ ಮೂರು ದಶಕಗಳಲ್ಲಿ ಶರೀಫ್ ಚಾಚಾ ಅವರು ಸುಮಾರು 25,000ಕ್ಕೂ ಹೆಚ್ಚು ಅನಾಥ ಶವಗಳಿಗೆ ಗೌರವಯುತವಾಗಿ ಅಂತ್ಯಸಂಸ್ಕಾರ ನೆರವೇರಿಸಿದ್ದಾರೆ. ಅವರ ಸೇವೆಯಲ್ಲಿ ಜಾತಿ–ಧರ್ಮದ ಹಂಗಿರಲಿಲ್ಲ. ಶವದ ಧರ್ಮವನ್ನು ಪತ್ತೆಹಚ್ಚಿ, ಹಿಂದೂ ಆಗಿದ್ದರೆ ದಹನ ಸಂಸ್ಕಾರ,ಮುಸ್ಲಿಂ ಆಗಿದ್ದರೆ ದಫನ ಕ್ರಿಯೆಯನ್ನು ಆಯಾ ಧರ್ಮದ ವಿಧಿವಿಧಾನಗಳಂತೆಯೇ ಮಾಡುತ್ತಿದ್ದರು.ಯಾರೂ ಇಲ್ಲದವರಿಗೆ ತಾವೇ ಮಗನಾಗಿ, ಸಹೋದರನಾಗಿ ನಿಂತು ಮಾನವೀಯತೆ ಮೆರೆದರು.



ಇವರ ಈ ಅಪ್ರತಿಮ ಸೇವೆಯನ್ನು ಗುರುತಿಸಿ ಭಾರತ ಸರ್ಕಾರ 2020ರಲ್ಲಿ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು.ಪ್ರಶಸ್ತಿಗಿಂತಲೂ ಮಿಗಿಲಾಗಿ ಇವರು ಗಳಿಸಿದ್ದು ಅಸಂಖ್ಯಾತ ಜನರ ಪ್ರೀತಿ ಮತ್ತು ಗೌರವ.

ಸಾಧನೆ ಮಾಡಲು ಕೇವಲ ಹಣ ಅಥವಾ ಅಧಿಕಾರ ಬೇಕಿಲ್ಲ, ನೋವಿನಲ್ಲೂ ಇನ್ನೊಬ್ಬರ ಕಣ್ಣೀರು ಒರೆಸುವ ದೊಡ್ಡ ಮನಸ್ಸಿದ್ದರೆ ಸಾಕು ಎಂಬುದಕ್ಕೆ ಶರೀಫ್ ಚಾಚಾ ಅವರ ಬದುಕು ನಮಗೆಲ್ಲರಿಗೂ ದಾರಿದೀಪ. ಮನುಷ್ಯತ್ವವೇ ಶ್ರೇಷ್ಠ ಧರ್ಮ ಎಂಬುದು ಇವರ ಬದುಕಿನ ಸಾರ.


# 'ಗುರುಕೃಪೆಯಿಂದ ರೋಗ-ಬಾಧೆ ನಿವೃತ್ತಿಯಾಯಿತು'



▪ ಗೌತಮಾಯನ

ಗುರುಪೂರ್ಣಮಿಗೆ ಶ್ರೀಗಳವರ ದರ್ಶನಕ್ಕೆ ಹೋಗಿದ್ದ ಸಾಗರ ಬದಿಯ ಭಕ್ತರು ಶ್ರೀಗಳವರನ್ನು ತಮ್ಮ ಬದಿಗೆ ಬನ್ನಿ ಎಂಬುದಾಗಿ ಪ್ರಾರ್ಥಿಸಿಕೊಂಡಿದ್ದರು. ಅಂತೆಯೇ, ಚಾತುರ್ಮಾಸ್ಯ ನಂತರ ಶ್ರೀಗಳು ಸಾಗರ ಕಡೆಗೆ ಹೋಗುವ ಮನಸ್ಸು ಮಾಡಿದ್ದರು. ಆ ಸಮಯದಲ್ಲಿ ಮಂಜುನಾಥ ಅಯ್ಯರರು, ಶ್ರೀಗಳವರನ್ನು ತಮ್ಮಲ್ಲಿಗೆ ಬಂದೇ ಹೋಗಬೇಕು ಎಂದು ಪ್ರಾರ್ಥಿಸಿಕೊಂಡರು. ನಮ್ಮಲ್ಲಿಗೆ ಬಂದು ನಮ್ಮನ್ನು ಹರಸಿ ಎಂಬುದಾಗಿ ಮಾಡಿಕೊಂಡ ಅಯ್ಯರರ ಪ್ರಾರ್ಥನೆಯನ್ನು ಮನ್ನಿಸಿ ಶ್ರೀಗಳು ಮೈಸೂರಿಗೆ ಬಂದರು. ಇದು ನವರಾತ್ರಿಯ ಸಮಯವಾಗಿದ್ದಿತು. ಇಲ್ಲಿದ್ದಾಗ ಸುಂದರ ರಾಯರೆಂಬ ವಕೀಲರ ಅಗಾಧ ಮೂಲವ್ಯಾಧಿ ರೋಗವನ್ನು ತೀರ್ಥ-ಮಂತ್ರಾಕ್ಷತೆ ನೀಡಿ ಗುಣಪಡಿಸಿದರು. ಇಲ್ಲಿಂದ ಮುಂದೆ ಪ್ರಯಾಣ ಬೆಳೆಸಿ ಚಿತ್ರದುರ್ಗಕ್ಕೆ ಬಂದರು. ಚಿತ್ರದುರ್ಗದಲ್ಲಿ ಭಿಕ್ಷೆ ಪಾದಪೂಜೆಯನ್ನು ಸ್ವೀಕರಿಸಿ ಅಲ್ಲಿಯ ಭಕ್ತಾದಿಗಳನ್ನು ಆಶೀರ್ವದಿಸಿ ಶಿವಮೊಗ್ಗಕ್ಕೆ ಬಂದರು ಶಿವಮೊಗ್ಗದಲ್ಲಿ ಶೃಂಗೇರಿ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರ ಜಯಂತಿ ಉತ್ಸವವು ನಡೆಯುತ್ತಿತ್ತು. ಈ ಪ್ರಯುಕ್ತ ಇಲ್ಲಿಯ ಭಕ್ತಾದಿಗಳು ಶ್ರೀಗಳವರನ್ನು ಆಹ್ವಾನಿಸಿದ್ದರು. ಎರಡು ಆನಂದದ ಮಹೋದಧಿಗಳ ಪ್ರೀತಿಯ ಸಂಗಮವಾದಂತಾಯಿತು. ಭಕ್ತಾದಿಗಳಿಗೆ ಆನಂದವೇ ಆನಂದವಾಯಿತು. ಶ್ರೀಗಳವರ ಪರಮ ಭಕ್ತರಾದ ಶ್ರೀ ಅನಂತ ಪದ್ಮನಾಭ ಭಟ್ಟರು ಶಿವಮೊಗ್ಗದಲ್ಲಿ ಶ್ರೀಗಳವರಿಂದಲೇ ಒಂದು ಶ್ರೀಧರಾಶ್ರಮ ಉದ್ಘಾಟನೆಯನ್ನು ಮಾಡಿಸಿದರು. ಶ್ರೀಗಳವರು ಶಿವಮೊಗ್ಗದಲ್ಲಿದ್ದಾಗ ಅನೇಕ ಜನರು ಶ್ರೀಗಳ ದರ್ಶನಕ್ಕೆ ಬಂದು ತಮ್ಮತಮ್ಮ ದುಃಖ, ರೋಗ, ಬಾಧೆ, ಇತ್ಯಾದಿಗಳನ್ನು ಪರಿಹರಿಸಿಕೊಂಡರು. ಅವರಲ್ಲೊಬ್ಬರಾದ ಗಿರಿಜಮ್ಮ ಎಂಬುವರು ತಮಗೆ ಗುರುಕೃಪೆಯಿಂದ ಬಾಧೆ ನಿವೃತ್ತಿಯಾದ ಘಟನೆಯನ್ನು ವಿವರಿಸಿದ್ದಾರೆ.

ಶ್ರೀ ಎಸ್.ಮಂಜುನಾಥ ರಾಯರ ಮಡದಿಯಾದ ಇವರ ಕಥೆಯನ್ನು ಅವರ ಮಾತಲ್ಲೇ ಕೇಳೋಣ. ಹೊಟ್ಟೆ ಶೂಲೆ, ಗಂಡಮಾಲೆ, ಗಂಟಲು ನೋವು ಇವುಗಳಿಂದ ಸುಮಾರು ಒಂಬತ್ತು ವರ್ಷಗಳ ಕಾಲ ನರಳುತ್ತಿದ್ದೆ. ಎಷ್ಟೆಷ್ಟೋ ಔಷಧೋಪಚಾರ ನಡೆಸಿದರೂ ಪ್ರಯೋಜನವಾಗಿರಲಿಲ್ಲ. ಮತ್ತು ಸಂತಾನ ಭಾಗ್ಯವೂ ಇಲ್ಲದೆ ಸಂಕಟಪಡುತ್ತಿದ್ದೆ. ಸದ್ಗುರುಗಳು ಶಿವಮೊಗ್ಗಕ್ಕೆ ಬಂದಿರುವುದು ಬೇರೆಯವರಿಂದ ತಿಳಿಯಿತು. ಅಂತೆಯೇ ನಾನು ಶ್ರೀಗಳವರು ಆಗಮಿಸಿದ ಮನೆಗೆ ಹೋಗಿ ಅವರಿಗೆ ನನ್ನ ಎಲ್ಲಾ ಸಂಕಟಗಳ ಬಗ್ಗೆ ನಿವೇದನೆ ಮಾಡಿಕೊಂಡೆ. ಎಲ್ಲಾ ವಿಷಯ ಕೇಳಿದ ಶ್ರೀ ಗುರುದೇವರು ನನ್ನ ಕುತ್ತಿಗೆಗೆ ತೀರ್ಥ ಮತ್ತು ಭಸ್ಮವನ್ನು ಹಾಕಿ, ಹೊಟ್ಟೆಗೂ ಅದನ್ನೇ ತೆಗೆದುಕೊಳ್ಳಲು ಹೇಳಿ, ಫಲ ಮಂತ್ರಾಕ್ಷತೆಯನ್ನು ಅನುಗ್ರಹಿಸಿದರು. ಸದ್ಗುರು ಭಗವಾನ್ ಶ್ರೀ ಶ್ರೀಧರ ಸ್ವಾಮಿಗಳವರ ಆಶೀರ್ವಾದವನ್ನೇ ನಂಬಿ, ಎಲ್ಲಾ ಔಷಧಗಳನ್ನೂ ತೊರೆದು, ಅವರು ನೀಡಿದ ಭಸ್ಮವನ್ನೇ ಹಚ್ಚುತ್ತಾ ತೀರ್ಥವನ್ನು ಸೇವಿಸುತ್ತಾ ಬಂದೆ. ಆನಂತರ ಶ್ರೀಗಳು ಸಾಗರ ಸಮೀಪದ ಮಂಚಾಲೆಯಲ್ಲಿ ಇದ್ದಾಗ, ಅತ್ತೆ ಮಾವನವರೊಂದಿಗೆ ಮತ್ತೆ ಗುರುದರ್ಶನ ಪಡೆದು ಗುರುಸನ್ನಿಧಿಯಲ್ಲಿ ಎರಡು ದಿನ ಉಳಿದೆವು. ನನ್ನ ರೋಗಗಳೆಲ್ಲವೂ ನಿಧಾನವಾಗಿ ಗುಣವಾಗಿತ್ತು. ಫಲ ಮಂತ್ರಾಕ್ಷತೆ ತೀರ್ಥ ಭಸ್ಮಾದಿಗಳಿಂದ ನನ್ನ ದೇಹದ ಬಾಧೆಗಳೆಲ್ಲ ದೂರಾಗಿ ಕೆಲವು ವರ್ಷಗಳಲ್ಲಿ ನನಗೆ ಒಂದು ಹೆಣ್ಣು ಮಗುವೂ ಜನಿಸಿತು. ಮೂರು ನಾಲ್ಕು ವರ್ಷಗಳ ನಂತರ ನಮ್ಮ ಮನೆಯಲ್ಲಿ ಗುರುಗಳಿಗೆ ಪಾದಪೂಜೆ ಮಾಡಿದ ಸಮಯದಲ್ಲಿ ಗುರುಗಳು ಫಲ ಮಂತ್ರಾಕ್ಷತೆ ಅನುಗ್ರಹಿಸಿ, ಗಂಡು ಮಗು ಸಹಿತ ಇನ್ನೊಮ್ಮೆ ದರ್ಶನಕ್ಕೆ ಬಾ ಎಂದು ಆಶೀರ್ವದಿಸಿದರು. ಮುಂದೆ ಗುರುಗಳ ವರಪ್ರಸಾದದಿಂದ ಗಂಡು ಮಗುವೂ ಆಯಿತು. ಒಮ್ಮೆ ಮನಸ್ಸಿಗೆ ಬಹಳ ಬೇಸರವಾಗಿ ಅದೇ ಯೋಚನೆಯಲ್ಲಿ ರಾತ್ರಿ ಮಲಗಿರುವಾಗ, ಮಧ್ಯರಾತ್ರಿಯ ಸಮಯದಲ್ಲಿ ಸ್ವಪ್ನದಲ್ಲಿ ಶ್ರೀ ಗುರುಗಳು ಕಾಣಿಸಿಕೊಂಡು ಆಶೀರ್ವದಿಸಿ ಮಂತ್ರಾಕ್ಷತೆ ನೀಡಿದರು. ಕೂಡಲೇ ಎಚ್ಚರವಾಗಿ ನೋಡಿದಾಗ ನನ್ನ ಕೈಯಲ್ಲಿ ನಿಜವಾಗಿಯೂ ಮಂತ್ರಾಕ್ಷತೆ ಇದ್ದಿತ್ತು. ಆ ಸಂತೋಷವನ್ನು ಬಣ್ಣಿಸಲು ನಾನು ಶಕ್ತಳಲ್ಲ. ಮನೆಯಲ್ಲಿ ಹಿರಿಯರಿಗೆ ಈ ವಿಷಯವನ್ನು ತಿಳಿಸಿದಾಗ ಅವರೆಲ್ಲರಿಗೂ ಅಪಾರ ಆನಂದವಾಯಿತು. ಆ ಮಂತ್ರಾಕ್ಷತೆ ಪ್ರಸಾದವನ್ನು ಕರಡಿಗೆಯಲ್ಲಿಟ್ಟು ಈಗಲೂ ಪೂಜಿಸುತ್ತಿದ್ದೇನೆ. ನನ್ನಂತಹ ಅಜ್ಞಾನಿ ಭಕ್ತಿಹೀನಳಿಗೆ ಇಷ್ಟು ಕೃಪೆದೋರುವ ದಯಾರ್ದ್ರ ಅಂತಃಕರಣದ ಈ ಮಹಾಮಹಿಮ ಗುರುವರರು ನಮ್ಮನ್ನು ಎಂದಿಗೂ ಕಾಪಾಡಿ ಸಲಹಲಿ ಎಂದು ಪ್ರಾರ್ಥಿಸುತ್ತೇನೆ ಎಂಬುದಾಗಿ ಶ್ರೀಮತಿ ಗಿರಿಜಮ್ಮ ಅವರು ನುಡಿದರು.



ಶ್ರೀಗಳವರು ಶಿವಮೊಗ್ಗ ನಗರದಲ್ಲಿ ಕೆಲದಿನಗಳಿದ್ದು ಪ್ರವಚನ ನೀಡಿ ಭಕ್ತರ ಪಾದಪೂಜೆ ಭಿಕ್ಷೆಗಳನ್ನು ಸ್ವೀಕರಿಸಿದರು. ಮುಂದೆ ಆನಂದಪುರ ಊರಿಗೆ ಬಂದು ಭಕ್ತನೊಬ್ಬನ ಪಾದಪೂಜೆಯನ್ನು ಸ್ವೀಕರಿಸಿ ಅವನನ್ನು ಹರಸಿದರು. ಅಲ್ಲಿಂದ ಸಮೀಪದ ಹರತಾಳು ಎಂಬ ಊರಿಗೆ ಬಂದು, ಹರತಾಳು ಮಂಜಪ್ಪನವರು ಭಕ್ತಿಯಿಂದ ಮಾಡಿದ ಭಿಕ್ಷೆ-ಪಾದಪೂಜೆಯನ್ನು ಸ್ವೀಕರಿಸಿ ಆಶೀರ್ವದಿಸಿ ಮುಂದೆ ಸಾಗರಕ್ಕೆ ಬಂದರು. ಸಾಗರದ ಗ್ರಾಮದೇವರಾದ ಶ್ರೀ ಮಹಾಗಣಪತಿಯ ದರ್ಶನವನ್ನು ಮಾಡಿ, ಅವನಿಗೆ ವಂದಿಸಿ ನಗರೇಶ್ವರ ದೇವಾಲಯಕ್ಕೆ ಬಂದರು. ಯಾವ ಊರಿಗೆ ಹೋದರೂ ಮೊದಲು ಗ್ರಾಮದೇವರ ದರ್ಶನ ಪಡೆದು ಮುಂದೆ ಊರಿನ ಎಲ್ಲಾ ದೇವರ ದರ್ಶನ ಪಡೆಯುವುದು ಶ್ರೀಗಳ ಕ್ರಮವಾಗಿತ್ತು. ದೇವರ ದರ್ಶನ ಪಡೆದು ಸಾಗರದಲ್ಲಿ ತಂಗಿದರು. ಸಮುದ್ರದಲ್ಲಿ ಭರತ ಉಕ್ಕುವಂತೆ, ಸಾಗರ ಮತ್ತು ಸುತ್ತಮುತ್ತಲಿನ ಜನರ ಭಕ್ತಿ ಎಂಬುದು ಈ ಸಮಯದಲ್ಲಿ ಮೇರೆ ಮೀರಿತ್ತು. ಸಾಗರದಲ್ಲಿ ಸಾಗರದಂತೆ ಭಕ್ತ ಜನರು ಗುರುದರ್ಶನಕ್ಕೆ ಬರುತ್ತಲಿದ್ದರು. ಶ್ರೀಗಳವರಿಗೆ ಹಗಲೂ ರಾತ್ರಿ ಸಂಚಾರವೇ ಆಗಿತ್ತು. ಸಮೀಪದ ಹಲವಾರು ಊರುಗಳ ಜನರು ಬಂದು ಶ್ರೀಗಳನ್ನು ತಮ್ಮಲ್ಲಿಗೆ ಪಾದಪೂಜೆ ಭಿಕ್ಷೆಗೆ ಕರೆದೊಯ್ಯುತ್ತಿದ್ದರು. ಜಗತ್ತಿನ ಸಕಲ ಜೀವರಾಶಿಯ ಉದ್ಧಾರವನ್ನೇ ಬಯಸುತ್ತಿರುವ ಶ್ರೀಧರ ಸ್ವಾಮಿಗಳು ಹಗಲು ರಾತ್ರಿಯೆನ್ನದೆ ಸತತವಾಗಿ ಭಕ್ತರ ಮನೆಗಳಿಗೆ ತೆರಳುತ್ತ, ನಗರ ಹಳ್ಳಿ ಎಂಬ ಬೇಧವಿಲ್ಲದೆ, ಬಡವ ಬಲ್ಲಿದ ಎಂಬ ತಾರತಮ್ಯ ಮಾಡದೆ, ತನ್ನ ಮೊರೆ ಹೊಕ್ಕಿರುವ ಎಲ್ಲ ಭಕ್ತರ ಮನೆಗಳಿಗೆ ತೆರಳುತ್ತಾ, ಅವರಿಂದ ಪೂಜೆ ಸ್ವೀಕರಿಸುತ್ತಾ, ಎಲ್ಲರಿಗೂ ರಕ್ಷೆ ನೀಡುತ್ತಿದ್ದರು. ಸದ್ಗುರು ಶ್ರೀಧರ ಭಗವಾನರು ಯಾವುದೇ ಊರಿಗೆ ಹೋದಾಗಲೂ ಮೊದಲು ಆಯಾ ಊರಿನಲ್ಲಿ ಇರುವ ದೇವಸ್ಥಾನಗಳಿಗೆ ಭೇಟಿ ನೀಡಿ ಅಲ್ಲಿ ಯಾವುದಾದರೂ ದುಷ್ಟ ಶಕ್ತಿಗಳು ಸೇರಿಕೊಂಡಿದ್ದರೆ ಅವುಗಳನ್ನು ತೆಗೆದುಹಾಕಿ ದೇವರಲ್ಲಿ ಸಾತ್ವಿಕ ಕಲೆ ತುಂಬುತ್ತಿದ್ದರು.

(ಮುಂದುವರಿಯುವುದು)

# ಅಜಾಮಿಳನ ಕಥೆ

## ನಾಮಸ್ಮರಣೆ, ಕರ್ಮ-ಶರಣಾಗತಿಯ ನಿಜಾರ್ಥ



| ಡಾ. ನಿರ್ಮಲಾ ಶರ್ಮಾ.



ಭಾರತೀಯ ಪುರಾಣ ಪರಂಪರೆಯನ್ನು ಸ್ವಲ್ಪ ಮಟ್ಟಿಗಾದರೂ ಓದಿರುವವರಿಗೆ ಅಜಾಮಿಳನ ಕಥೆ ಪರಿಚಿತವಾಗಿರುತ್ತದೆ. ಮೇಲ್ನೋಟಕ್ಕೆ ಇದು ಸರಳ ಕಥೆಯಂತೆ ಕಾಣಿಸಿದರೂ, ಅದರೊಳಗೆ ಮಾನವನ ಪತನ, ಪಶ್ಚಾತ್ತಾಪ, ಕರ್ಮಸಿದ್ಧಾಂತ ಮತ್ತು ಭಕ್ತಿಯ ಮಹತ್ವವನ್ನು ತಿಳಿಸುವ ಆಳವಾದ ತತ್ವಚಿಂತನೆ ಅಡಗಿದೆ.

ಅಜಾಮಿಳನು ಒಬ್ಬ ಸತ್ಸಂಸ್ಕೃತ ಕುಟುಂಬದಲ್ಲಿ ಜನಿಸಿದವನು. ಬಾಲ್ಯದಲ್ಲಿ ಶಾಸ್ತ್ರೋಕ್ತ ಆಚರಣೆಗಳನ್ನು ಪಾಲಿಸಿ, ಸನ್ಮಾರ್ಗದಲ್ಲಿ ನಡೆದು ಬಂದವನು. ಆದರೆ, ಜೀವನದ ಒಂದು ಹಂತದಲ್ಲಿ ಅವನು ದಾರಿ ತಪ್ಪಿ ದುರ್ವ್ಯಾಸನಗಳಿಗೆ ಒಳಗಾದನು. ವೇಶ್ಯೆಯರ ಸಹವಾಸದಲ್ಲಿ ಮುಳುಗಿ, ತನ್ನ ಕುಲಾಚಾರ, ಧರ್ಮ, ಆಚರಣೆ ಮತ್ತು ಶಿಸ್ತಿನ ಬದುಕನ್ನು ಸಂಪೂರ್ಣವಾಗಿ ತ್ಯಜಿಸಿದನು. ಅವನ ಬದುಕು ಅಸಂಯಮ ಮತ್ತು ಅಕ್ರಮಗಳಿಂದ ಕೂಡಿಬಿಟ್ಟಿತು.

ಇಂತಹ ಅಜಾಮಿಳನು ತನ್ನ ಅಂತ್ಯಕಾಲದಲ್ಲಿ ನಾರಾಯಣ ಎಂಬ ನಾಮವನ್ನು ಉಚ್ಚರಿಸಿದ ಕಾರಣಕ್ಕೆ ಮೋಕ್ಷವನ್ನು ಪಡೆದನು ಎಂಬ ಕಥೆ ಸಾಮಾನ್ಯವಾಗಿ ಪ್ರಸಿದ್ಧವಾಗಿದೆ. ಈ ಕಥೆಯ ಮೇಲ್ನೋಟದ ಅರ್ಥ ಏನೆಂದರೆ ಜೀವನಪೂರ್ತಿ ಎಷ್ಟೇ ಪಾಪ ಮಾಡಿದರೂ, ಕೊನೆಯ ಕ್ಷಣದಲ್ಲಿ ಭಗವಂತನ ನಾಮವನ್ನು ಉಚ್ಚರಿಸಿದರೆ ಮೋಕ್ಷ ದೊರೆಯುತ್ತದೆ ಎಂಬುದು. ಆದರೆ, ಈ ಅರ್ಥವನ್ನು ನೇರವಾಗಿ ಸ್ವೀಕರಿಸುವುದು ಸರಳವಾದರೂ, ಅದು ಸಂಪೂರ್ಣ ತಾತ್ವಿಕ ಸತ್ಯವಲ್ಲ.

ಇಲ್ಲಿ ಒಂದು ಪ್ರಮುಖ ಪ್ರಶ್ನೆ ಉದ್ಭವಿಸುತ್ತದೆ ಭಕ್ತಿಯಿಲ್ಲದೆ ಕೇವಲ ಬಾಯಿಂದ ಉಚ್ಚರಿಸಿದ ನಾಮಕ್ಕೆ ಭಗವಂತನ ಅನುಗ್ರಹ ದೊರೆಯುತ್ತದೆಯೇ? ನಾಮಸ್ಮರಣೆಯ ಹಿಂದೆ ಇರುವ ಭಾವನೆ, ಭಕ್ತಿ ಮತ್ತು ಮನಃಶುದ್ಧತೆ ಮುಖ್ಯ. ಕೇವಲ ಶಬ್ದದ ಉಚ್ಚಾರಣೆಯೇ ಮೋಕ್ಷಕ್ಕೆ ಕಾರಣವಾಗುವುದಿಲ್ಲ.

ಈ ವಿಷಯವನ್ನು ಮತ್ತಷ್ಟು ಸ್ಪಷ್ಟಗೊಳಿಸಲು ಒಂದು ಪ್ರಸಿದ್ಧ ಉದಾಹರಣೆಯನ್ನು ಗಮನಿಸಬಹುದು. ಶ್ರೀರಂಗದ ಅಕ್ಕಿ ಎಂದು ಕೂಗುತ್ತಾ ಅಕ್ಕಿ ಮಾರುವವನ ಉದಾಹರಣೆ ನಮಗೆ ಗೊತ್ತಿದೆ. ಅವನು ವ್ಯಾಪಾರಕ್ಕಾಗಿ ಕೂಗುತ್ತಿದ್ದರೂ, ಅವನ ಮನಸ್ಸಿನಲ್ಲಿ ಶ್ರೀರಂಗನ ಮೇಲೆ ಇರುವ ಭಕ್ತಿ ಮತ್ತು ಅಭಿಮಾನವೇ ಆ ನಾಮಕ್ಕೆ ಜೀವ ತುಂಬುತ್ತದೆ. ನಾಮದ ಹಿಂದೆ ಇರುವ ಭಾವನೆ ಇಲ್ಲದೆ ಅದರ ಆಧ್ಯಾತ್ಮಿಕ ಪರಿಣಾಮವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ.

ಕೆಲವು ಧರ್ಮಗಳಲ್ಲಿ ಪಾಪಗಳಿಗೆ ತಪ್ಪೊಪ್ಪಿಗೆ ನೀಡಿದರೆ ಪಾಪಗಳು ನಿವಾರಣೆಯಾಗುತ್ತವೆ ಎಂಬ ನಂಬಿಕೆ ಇದೆ. ಆದರೆ ಸನಾತನ ಧರ್ಮದಲ್ಲಿ ಕರ್ಮಸಿದ್ಧಾಂತ ಅತ್ಯಂತ ಪ್ರಮುಖ. ಮಾಡಿದ ಪಾಪಗಳು ಸಂಚಿತಕರ್ಮವಾಗಿ ನಮ್ಮನ್ನು ಜನ್ಮಾಂತರಗಳಲ್ಲೂ ಬೆನ್ನಟ್ಟುತ್ತವೆ. ಈ ಜನ್ಮದಲ್ಲಿ ಫಲಿತಾಂಶ ದೊರಕದಿದ್ದರೂ, ಮುಂದಿನ ಜನ್ಮಗಳಲ್ಲಿ ಅದು ಅನಿವಾರ್ಯವಾಗಿ ಫಲ ನೀಡುತ್ತದೆ. ಆದ್ದರಿಂದ, ಕೇವಲ ಅಂತ್ಯಕಾಲದ ನಾಮಸ್ಮರಣೆ ಮೂಲಕ ಎಲ್ಲಾ ಪಾಪಗಳು ನಿವಾರಣೆಯಾಗುತ್ತವೆ ಎಂಬ ಕಲ್ಪನೆ ತಾತ್ವಿಕವಾಗಿ ಸಮರ್ಪಕವಾಗುವುದಿಲ್ಲ.

ಇಲ್ಲಿ ಅಜಾಮಿಳನ ಕಥೆಯನ್ನು ಆಳವಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ಅವನು ತನ್ನ ಜೀವನದ ಕೊನೆಯ ಹಂತದಲ್ಲಿ ತನ್ನ ತಪ್ಪುಗಳನ್ನು ಅರಿತು ಪಶ್ಚಾತ್ತಾಪ ಪಟ್ಟನು. ಆ ಪಶ್ಚಾತ್ತಾಪವು ಅವನಲ್ಲಿ ಆಂತರಿಕ ಪರಿವರ್ತನೆಯನ್ನು ಉಂಟುಮಾಡಿತು. ಆಧ್ಯಾತ್ಮಿಕ ಸಾಧನೆ, ಗಂಗಾಸ್ನಾನ, ಸತ್ಸಂಗ ಮತ್ತು ಭಗವಂತನ ಧ್ಯಾನದ ಮೂಲಕ ಅವನು ತನ್ನ ಮನಸ್ಸನ್ನು ಶುದ್ಧಗೊಳಿಸಲು ಪ್ರಯತ್ನಿಸಿದನು. ಈ ನಿರಂತರ ಸಾಧನೆಯ ಪರಿಣಾಮವಾಗಿ, ಅವನ ಮನಸ್ಸು ಭಗವಂತನಲ್ಲಿ ನೆಲಸಿತು.

ಆದ್ದರಿಂದಲೇ, ಅಂತಿಮ ಕ್ಷಣದಲ್ಲಿ ಅವನ ಬಾಯಿಂದ ನಾರಾಯಣ ಎಂಬ ನಾಮವು ಸಹಜವಾಗಿ ಹೊರಬಂದಿತು. ಇದು ಕೇವಲ ಮಗನ ಹೆಸರನ್ನು ಕರೆದ ಉಚ್ಚಾರಣೆಯಲ್ಲ; ಅದು ಅವನ ಮನಸ್ಸಿನ ಆಳದಲ್ಲಿ ನೆಲೆಸಿದ ಭಕ್ತಿಯ ಅಭಿವ್ಯಕ್ತಿ. ಈ ಮನಃಪರಿವರ್ತನೆಯೇ ಅವನನ್ನು ರಕ್ಷಿಸಿತು.

ಪುರಾಣಗಳಲ್ಲಿ ವಿಷ್ಣುದೂತರು ಮತ್ತು ಯಮದೂತರು ಅಜಾಮಿಳನ ಆತ್ಮವನ್ನು ಪಡೆದುಕೊಳ್ಳಲು ವಾಗ್ವಾದ ನಡೆಸಿದ ಘಟನೆ ಪ್ರಸಿದ್ಧವಾಗಿದೆ. ಕೊನೆಗೆ, ಅವನ ಭಕ್ತಿಯನ್ನು ಗುರುತಿಸಿದ ವಿಷ್ಣುದೂತರು ಅವನನ್ನು ವೈಕುಂಠಕ್ಕೆ ಕರೆದೊಯ್ಯುತ್ತಾರೆ. ಈ ಘಟನೆ, ಭಕ್ತಿಯ ಶಕ್ತಿಯನ್ನು ಮತ್ತು ಶರಣಾಗತಿಯ ಮಹತ್ವವನ್ನು ಸಾರುತ್ತದೆ.

ಯಮಧರ್ಮರಾಜನು ತನ್ನ ದೂತರಿಗೆ ನೀಡಿದ ಉಪದೇಶವೂ ಇಲ್ಲಿ ಅತ್ಯಂತ ಮಹತ್ವದ್ದಾಗಿದೆ. ಭಗವಂತನ ಭಕ್ತರನ್ನು ಸ್ಪರ್ಶಿಸಬಾರದು ಎಂದು ಅವನು ಹೇಳಿದ ಪ್ರಸಿದ್ಧ ಶ್ಲೋಕ, ಭಕ್ತಿಯ ಮಹಿಮೆಯನ್ನು ಸ್ಪಷ್ಟಪಡಿಸುತ್ತದೆ. ಭಗವಂತನಲ್ಲಿ ಶರಣಾಗತಿಯಾದವರ ಮೇಲೆ ಯಮನಿಗೂ ಅಧಿಕಾರವಿಲ್ಲ ಎಂಬ ಸಂದೇಶ ಇದರಲ್ಲಿ ಅಡಗಿದೆ.

ಈ ತತ್ವವನ್ನು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ನೀಡಿದ ಮಾಮನುಸ್ಮರ ಯುದ್ಧ್ಯ ಚ ಎಂಬ ಉಪದೇಶ ಮತ್ತಷ್ಟು ಬಲಪಡಿಸುತ್ತದೆ ಯಾವುದೇ ಕಾರ್ಯವನ್ನು ನಿರ್ವಹಿಸುತ್ತಿದ್ದರೂ, ಮನಸ್ಸಿನಲ್ಲಿ ಭಗವಂತನ ಸ್ಮರಣೆ ಇರಬೇಕು. ಇದೇ ತತ್ವವನ್ನು ವರಾಹ ಅವತಾರದ ಸಂದರ್ಭದಲ್ಲಿ ಭಗವಂತನು ನೀಡಿದ ಭರವಸೆ ಇನ್ನಷ್ಟು ಸ್ಪಷ್ಟಗೊಳಿಸುತ್ತದೆ. ಭಕ್ತನು ತನ್ನ ಜೀವನದಲ್ಲಿ ಒಮ್ಮೆಯಾದರೂ ಮನಸ್ಸಾರೆ ಭಗವಂತನನ್ನು ನೆನೆದಿದ್ದರೆ, ಅಂತ್ಯಕಾಲದಲ್ಲಿ ಅವನಿಗೆ ಸಾಧ್ಯವಾಗದಿದ್ದರೂ, ಭಗವಂತನೇ ಅವನನ್ನು ನೆನೆದು ಪರಮಗತಿಗೆ ಕರೆದೊಯ್ಯುತ್ತಾನೆ ಎಂಬುದೇ ವರಾಹ ಚರಮ ಶ್ಲೋಕದ ಸಾರ.

ಒಟ್ಟಾರೆ, ಅಜಾಮಿಳನ ಕಥೆ ನಮಗೆ ಸುಲಭ ಮಾರ್ಗವನ್ನು ಕಲಿಸುವುದಿಲ್ಲ; ಬದಲಿಗೆ, ಅದು ಎಚ್ಚರಿಕೆಯ ಸಂದೇಶವನ್ನು ನೀಡುತ್ತದೆ. ಪಾಪಗಳನ್ನು ಮಾಡುತ್ತಾ ಕೊನೆಯ ಕ್ಷಣದ ನಾಮಸ್ಮರಣೆಯ ಮೇಲೆ ಅವಲಂಬಿಸುವುದು ತಪ್ಪು. ಬದಲಿಗೆ, ಜೀವನಪೂರ್ತಿ ಭಕ್ತಿ, ಶುದ್ಧತೆ ಮತ್ತು ಶರಣಾಗತಿಯ ಮಾರ್ಗವನ್ನು ಅನುಸರಿಸಬೇಕು.

ಭಗವಂತನ ನಾಮವು ಕೇವಲ ಶಬ್ದವಲ್ಲ; ಅದು ಭಾವ, ಭಕ್ತಿ ಮತ್ತು ಅನುಭವದ ಸಂಯೋಗ. ಆ ಭಾವದೊಂದಿಗೆ ಉಚ್ಚರಿಸಿದ ನಾಮವೇ ಮೋಕ್ಷದ ದಾರಿಯನ್ನು ತೆರೆದಿಡುತ್ತದೆ.

# ಕ್ರಿಯಾಯೋಗದ ಮಹಾಗುರು ಶ್ರೀಯುಕ್ತೇಶ್ವರ ಗಿರಿ



ಡಾ.ಗುರುಪ್ರಸಾದ ರಾವ್ ಹವಲ್ದಾರ್

ಭಾರತದ ಆಧ್ಯಾತ್ಮಿಕ ಇತಿಹಾಸದಲ್ಲಿ ಕೆಲವರು ಕೇವಲ ಸಾಧಕರು ಮಾತ್ರವಲ್ಲ, ದಾರಿದೀಪರಾಗುತ್ತಾರೆ. ಅಂತಹ ಮಹಾನ್ ವ್ಯಕ್ತಿತ್ವಗಳಲ್ಲಿ ಶ್ರೀ ಯುಕ್ತೇಶ್ವರ ಗಿರಿ ಪ್ರಮುಖರು. ಕ್ರಿಯಾಯೋಗದ ಮೂಲಕ ಆತ್ಮಸಾಕ್ಷಾತ್ಕಾರವನ್ನು ವೈಜ್ಞಾನಿಕ ವಿಧಾನದಲ್ಲಿ ಅರಿಯಬಹುದು ಎಂಬ ಸಂದೇಶವನ್ನು ಅವರು ತಮ್ಮ ಜೀವನದ ಮೂಲಕವೇ ಸಾಬೀತುಪಡಿಸಿದರು.

1855ರ ಮೇ 10ರಂದು ಪಶ್ಚಿಮ ಬಂಗಾಳದ ಸೆರಾಂಪೋರ್‌ನಲ್ಲಿ ಪ್ರಿಯಾ ನಾಥ್ ಕರಾರ್ ಎಂಬ ಹೆಸರಿನಲ್ಲಿ ಜನಿಸಿದ ಅವರು, ಬಾಲ್ಯದಿಂದಲೇ ಆಧ್ಯಾತ್ಮಿಕ ಚಿಂತನೆಗಳತ್ತ ಆಕರ್ಷಿತರಾಗಿದ್ದರು. ಕುಟುಂಬದ ಜವಾಬ್ದಾರಿಗಳನ್ನು ಹೊತ್ತಿದ್ದರೂ, ಒಳಗಿನ ಜಿಜ್ಞಾಸೆಯನ್ನು ಕಳೆದುಕೊಳ್ಳಲಿಲ್ಲ. ವೇದಾಂತ, ಯೋಗ ಮತ್ತು ಜ್ಯೋತಿಷ್ಯದ ಅಧ್ಯಯನದ ಜೊತೆಗೆ ಪಾಶ್ಚಾತ್ಯ ಧರ್ಮಗ್ರಂಥಗಳ ಮೇಲೂ ಆಸಕ್ತಿ ಬೆಳೆಸಿಕೊಂಡಿದ್ದರು.

ಅವರ ಜೀವನದ ಮಹತ್ವದ ತಿರುವು ಲಾಹಿರಿ ಮಹಾಶಯ ಅವರನ್ನು ಗುರುವಾಗಿ ಸ್ವೀಕರಿಸಿದ ನಂತರ ಆರಂಭವಾಯಿತು. ಕ್ರಿಯಾಯೋಗದ ದೀಕ್ಷೆಯನ್ನು ಪಡೆದು, ಆಧ್ಯಾತ್ಮಿಕ ಸಾಧನೆಯಲ್ಲಿ ಅವರು ಹೊಸ ಹಾದಿ ಹಿಡಿದರು. ನಂತರ ಮಹಾವತಾರ್ ಬಾಬಾಜಿ ಅವರ ದರ್ಶನವೂ ಅವರಿಗೆ ದೊರಕಿತು ಎಂಬುದು ಪರಂಪರೆಯಲ್ಲಿ ಪ್ರಮುಖ ಘಟನೆಯಾಗಿ ಪರಿಗಣಿಸಲಾಗುತ್ತದೆ. ಬಾಬಾಜಿಯವರ ಸೂಚನೆಯಂತೆ, ಕ್ರಿಯಾಯೋಗವನ್ನು ವಿಶ್ವದಾದ್ಯಂತ ಹರಡುವ ಕಾರ್ಯದಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು.

ಶ್ರೀಯುಕ್ತೇಶ್ವರ ಗಿರಿಯವರ ಆಧ್ಯಾತ್ಮಿಕ ದರ್ಶನದ ಪ್ರಮುಖ ವೈಶಿಷ್ಟ್ಯವೆಂದರೆ ಧರ್ಮ ಮತ್ತು ವಿಜ್ಞಾನಗಳ ಏಕತೆಯ ಮೇಲೆ ಅವರ ದೃಢ ನಂಬಿಕೆ. ಅವರು ರಚಿಸಿದ ದಿ ಹೋಲಿ ಸೈನ್ಸ್ ಕೃತಿ, ಪೂರ್ವದ ವೇದಾಂತ ಮತ್ತು ಪಾಶ್ಚಾತ್ಯ ಬೈಬಲ್ ತತ್ವಗಳ ನಡುವಿನ ಮೂಲಭೂತ ಏಕತೆಯನ್ನು ವಿಶ್ಲೇಷಿಸುತ್ತದೆ. ಧರ್ಮಗಳ ನಡುವಿನ ವ್ಯತ್ಯಾಸಕ್ಕಿಂತಲೂ, ಅವುಗಳ ಅಂತರಾಳದಲ್ಲಿರುವ ಸಾಮ್ಯತೆಯನ್ನು ಅವರು ಸ್ಪಷ್ಟಪಡಿಸಿದರು.

ಗುರು-ಶಿಷ್ಯ ಪರಂಪರೆಯಲ್ಲಿ ಯುಕ್ತೇಶ್ವರ ಗಿರಿಯವರ ಸ್ಥಾನ ಅತ್ಯಂತ ವಿಶಿಷ್ಟವಾಗಿದೆ. ಅವರ ಶಿಷ್ಯರಾದ ಪರಮಹಂಸ ಯೋಗಾನಂದ ಅವರು ಕ್ರಿಯಾಯೋಗವನ್ನು ಪಾಶ್ಚಾತ್ಯ ದೇಶಗಳಿಗೆ ಪರಿಚಯಿಸಿ, ವಿಶ್ವದ ಮಟ್ಟದಲ್ಲಿ ಪ್ರಸಿದ್ಧಿಗೊಳಿಸಿದರು. ಯೋಗಾನಂದರ ಪ್ರಸಿದ್ಧ ಕೃತಿ ಆಟೋಬಯೋಗ್ರಫಿ ಆಫ್ ಎ ಯೋಗಿ ಮೂಲಕ ಲಕ್ಷಾಂತರ ಜನರು ಭಾರತೀಯ ಆಧ್ಯಾತ್ಮಿಕ ಪರಂಪರೆಯ ಮಹತ್ವವನ್ನು ಅರಿತುಕೊಂಡರು. ಈ ವಿಶ್ವಪ್ರಭಾವದ ಹಿಂದೆ ಯುಕ್ತೇಶ್ವರರ ಮಾರ್ಗದರ್ಶನವೇ ಮೂಲ ಶಕ್ತಿ ಎಂಬುದು ನಿಜ.




ಯುಕ್ತೇಶ್ವರ ಗಿರಿಯವರ ಬೋಧನೆಗಳು ಸರಳವಾಗಿದ್ದರೂ ಗಾಢವಾಗಿವೆ. ಅವರು ಆಧ್ಯಾತ್ಮಿಕತೆಯನ್ನು ಜೀವನದಿಂದ ಬೇರ್ಪಡಿಸದೆ, ಭೌತಿಕ ಮತ್ತು ಆಧ್ಯಾತ್ಮಿಕ ಜವಾಬ್ದಾರಿಗಳ ನಡುವೆ ಸಮತೋಲನ ಸಾಧಿಸುವುದನ್ನು ಒತ್ತಿ ಹೇಳಿದರು. ಕ್ರಿಯಾಯೋಗವನ್ನು ಆತ್ಮಸಾಕ್ಷಾತ್ಕಾರದ ನೇರ ಮಾರ್ಗವೆಂದು ಅವರು ನಿರೂಪಿಸಿದರು. ಅವರ ಪ್ರಕಾರ, ಮಾನವ ಮನಸ್ಸು ಅಪಾರ ಶಕ್ತಿಯ ಮೂಲವಾಗಿದ್ದು, ಸರಿಯಾದ ಸಾಧನೆಯ ಮೂಲಕ ಅದು ದೈವಿಕ ಸ್ಥಿತಿಗೆ ಏರಬಹುದು.

1936ರ ಮಾರ್ಚ್ 9ರಂದು ಪುರಿಯಲ್ಲಿ ಅವರು ಮಹಾಸಮಾಧಿ ಹೊಂದಿದರೂ, ಅವರ ಆಧ್ಯಾತ್ಮಿಕ ಪ್ರಭಾವ ಇಂದಿಗೂ ಜೀವಂತವಾಗಿದೆ. ಅವರ ಜೀವನ ಮತ್ತು ಬೋಧನೆಗಳು ಕಾಲಾತೀತವಾಗಿದ್ದು, ಇಂದಿನ ಯುಗದಲ್ಲೂ ಸಮಾನವಾಗಿ ಪ್ರಸ್ತುತವಾಗಿವೆ.

ಶ್ರೀಯುಕ್ತೇಶ್ವರ ಗಿರಿಯವರ ಜೀವನವು ಒಂದು ಮಹತ್ವದ ಸಂದೇಶವನ್ನು ನೀಡುತ್ತದೆ ಆಧ್ಯಾತ್ಮಿಕತೆ ಅಂಧ ನಂಬಿಕೆಯ ವಿಷಯವಲ್ಲ; ಅದು ಅನುಭವಿಸಬಹುದಾದ, ಅರಿಯಬಹುದಾದ ವಿಜ್ಞಾನ. ಅವರ ಮಾರ್ಗವು ಇಂದಿಗೂ ಅನೇಕ ಸಾಧಕರಿಗೆ ದಾರಿದೀಪವಾಗಿ ಉಳಿದಿದೆ.

# ಕೈಗೆ ದಾನವೇ ಭೂಷಣ



| ಸೌಮ್ಯ ಸನತ್



ಮನುಷ್ಯ ಜೀವನದಲ್ಲಿ ಮಾಡುವ ನಿಸ್ವಾರ್ಥ ಪರವಾದ ಕೆಲಸ ಕಾರ್ಯಗಳು ಧಾರ್ಮಿಕತೆಯ ಶ್ರೇಷ್ಠತೆಯನ್ನು ತಲುಪುತ್ತವೆ. ನಾವು ಮಾಡುವ ದಾನವು ಒಳ್ಳೆಯತನದಾಗಿದ್ದರೆ ಅದು ಸತ್ಸಂಗಕ್ಕೆ ಸಲ್ಲುತ್ತವೆ ಎಂಬ ಮಾತನ್ನು ಭಗವಾನ್ ಶ್ರೀ ಕೃಷ್ಣನ ಒಂದು ನಿದರ್ಶನದಿಂದ ನಾವಿಂದು ತಿಳಿಯೋಣ.

ಮಥುರಾ ನಗರದಲ್ಲಿನ ಪ್ರಜೆಗಳು ಸದಾ ಧರ್ಮಿಷ್ಠರೂ ನ್ಯಾಯ ಪ್ರಿಯರೂ, ನ್ಯಾಯಪ್ರಿಯರೂ

ಭಗವಂತನ ನಾಮಸ್ಮರಣೆಯಲ್ಲಿ ತಲ್ಲೀನರೂ ಆಗಿದ್ದರು ನಗರದ ದ್ವಾರದಲ್ಲಿ ಒಬ್ಬ ಸಾಧು ಶ್ರೀ ಕೃಷ್ಣ ಪರಮಾತ್ಮನ ನಾಮ ಸಂಕೀರ್ತನೆ ಮಾಡುತ್ತಿದ್ದ. ಅವನ ಕಂಠ ಮಾಧುರ್ಯ ತುಂಬಾ ಮಧುರವಾಗಿತ್ತು. ಜನರು ಅವನ ಹಾಡು ಕೇಳಿ ಮುಗ್ಧರಾಗುತ್ತಿದ್ದರು.

ನಗರದಲ್ಲಿ ಒಬ್ಬ ವ್ಯಾಪಾರಿಯಿದ್ದ ಅವನು ದಿನವೂ ದೇವಾಲಯಕ್ಕೆ ಹೋಗಿ ಪರಮಾತ್ಮನನ್ನು ಭಕ್ತಿಯಿಂದ ಪೂಜಿಸುತ್ತಿದ್ದ.ನಗರದ ದ್ವಾರದ ಬಳಿ ಬಂದಾಗ ಹಾಡುತ್ತಿದ್ದವನ ಮುಂದೆ ನಾಣ್ಯಗಳನ್ನು ಹಾಕುತ್ತಿದ್ದ. ಇದರಿಂದ ಅವನ ವ್ಯಾಪಾರ ದಿನೇದಿನೇ ವೃದ್ಧಿಸಿತು. ಹೇರಳ ಸಂಪಾದನೆಯಾಗುತ್ತಿತ್ತು. ಸಾಧುವಿಗೆ ತಾನು ಕೊಡುತ್ತಿರುವ ನಾಣ್ಯದ ಪ್ರಭಾವವೇ ಇದು ಎಂದು ಅವನು ಯೋಚಿಸಿದ.

ಸಾಧುವಿನ ಗುರುವನ್ನು ಹುಡುಕಿ ಅವರಿಗೆ ಹೆಚ್ಚು ಹೆಚ್ಚು ನಾಣ್ಯಗಳನ್ನು ಕೊಟ್ಟರೆ ತನ್ನ ವ್ಯಾಪಾರ ಇನ್ನೂ ದ್ವಿಗುಣಗೊಳ್ಳುತ್ತದೆ ನಾನು ಇನ್ನು ಶ್ರೀಮಂತನಾಗಬಹುದು ಎಂದು ಯೋಚಿಸಿದ. ವ್ಯಾಪಾರಿ ಮತ್ತು ಅವನ ಸೇವಕರು ಸಾಧುವಿನ ಗುರುವನ್ನು ಹುಡುಕುವ ಪ್ರಯತ್ನ ನಡೆಸಿದರು.

ನಗರದ ಹೊರಗೆ ಒಂದು ಕೋಟೆ ಯ ಶಿಥಿಲವಾದ ಒಂದು ಗೋಡೆಯನ್ನು ಒರಗಿಕೊಂಡು ಒಬ್ಬರು ಮಹರ್ಷಿ ಕುಳಿತಿದ್ದರು. ಅವರ ಹೆಸರು ಅನನ್ಯ ಕೀರ್ತಿ ಸಾಧು ಮಹಾರಾಜರ ಗುರು ಅವರೇ ಎಂದು ತಿಳಿಯಿತು ವ್ಯಾಪಾರಿಗೆ ತುಂಬಾ ಸಂತೋಷವಾಯಿತು.

ವ್ಯಾಪಾರಿ ಅವರ ಬಳಿ ಹೋದ ಅನನ್ಯ ಕೀರ್ತಿ ಕಣ್ಮುಚ್ಚಿ ಕುಳಿತಿದ್ದರು ಅವರ ಮುಂದೆ 10 ನಾಣ್ಯಗಳನ್ನು ಹಾಕಿ ಕೈಮುಗಿದು ಮನೆಗೆ ಹಿಂತಿರುಗಿದ. ಅವನು ಮನೆಯ ಬಳಿ ಬಂದಾಗ ಅವನು ಉಗ್ರಾಣಕ್ಕೆ ಬೆಂಕಿ ಬಿದ್ದಿತ್ತು. ಬೆಂಕಿ ಧಗಧಗನೆ ಉರಿಯುತ್ತಿತ್ತು ವ್ಯಾಪಾರಿ ಮತ್ತು ಜನರು ಬಹಳಷ್ಟು ಪ್ರಯತ್ನಿಸಿ ಬೆಂಕಿಯನ್ನು ನಂದಿಸಿದರು ಅಷ್ಟರಲ್ಲಿ ವ್ಯಾಪಾರಿಗೆ ತುಂಬಾ ನಷ್ಟವಾಗಿತ್ತು.



ವ್ಯಾಪಾರಿ ಮಾರನೆಯ ದಿನ ಸಾಧು ಮಹಾರಾಜರ ಬಳಿ ಬಂದ ನಡೆದ ಸಂಗತಿಯನ್ನು ಹೇಳಿದ. ನೀನು ಮೊದಲು ದಾನ ಮಾಡುತ್ತಿದ್ದಾಗ ಮನಸ್ಸು ಕಲ್ಮಶ ರಹಿತವಾಗಿತ್ತು. ಯಾವುದೇ ಸ್ವಾರ್ಥ ನಿನ್ನಲ್ಲಿ ಇರಲಿಲ್ಲ ಆದರೆ ನಿನ್ನೆ ಮಹರ್ಷಿಗೆ ಹಣ ನೀಡಿದಾಗ ನಿನ್ನಲ್ಲಿ ಸ್ವಾರ್ಥ ತುಂಬಿತ್ತು ಸ್ವಾರ್ಥದಿಂದ ಮಾಡಿದ ದಾನ ಎಂದು ಫಲ ನೀಡುವುದಿಲ್ಲ ಸಾದು ನಿರ್ವಿಕಾರ ದನಿಯಲ್ಲಿ ಹೇಳಿದರು. ವ್ಯಾಪಾರಿಗೆ ತನ್ನ ತಪ್ಪಿನ ಅರಿವಾಗಿತ್ತು ಸಾಧುವಿಗೆ ನಮಸ್ಕರಿಸಿ ಹಿಂದಿರುಗಿದ. ಜೀವನದಲ್ಲಿ ಕೊಡಬೇಕಾ ಎಂದು ಕೇಳಬೇಡ, ಕೊಡದೇ ಕೆಡಬೇಡ! ನಿಸ್ವಾರ್ಥದಾನ ಯಾವತ್ತಿಗೂ ಪವಿತ್ರ.ದಾನ ಮಾಡಿದರೆ ಜೀವನ ಸುಖವಾಗಿರುತ್ತದೆ.ಸ್ವಾರ್ಥ ಭಾವನೆಯಿಂದ ಯಾವತ್ತೂ ದಾನ ಮಾಡಬಾರದು ಹಾಗೆ ಮಾಡುವುದರಿಂದ ಪುಣ್ಯ ಬರುವುದಿಲ್ಲ.ಹಾಗೆಯೇ ಯಾರಿಗಾದರೂ ಕೊಟ್ಟ ನಂಬಿಕೆಯನ್ನು ದಾನ ಮಾಡಬಾರದು.ನಿಜವಾದ ತ್ಯಾಗಿ ಪ್ರಶಂಸೆ ಬಯಸುವುದಿಲ್ಲ ನಿಸ್ವಾರ್ಥ ದಾನಿ ಪ್ರಚಾರ ಬಯಸುವುದಿಲ್ಲ ದಾನ ಗುಪ್ತವಾಗಿರಲಿ ತ್ಯಾಗ ಸುಪ್ತವಾಗಿರಲಿ ದಾನ ಮಾಡಿದ ಮೇಲೆ ಹಪ ಹಪಿಸ ಬಾರದು ತ್ಯಾಗ ಮಾಡಿದ ಮೇಲೆ ಹಿಂತಿರುಗಿ ನೋಡಬಾರದು. ತೈತ್ತಿರೀಯ ಉಪನಿಷತ್ತಿನಲ್ಲಿ ದಾನವನ್ನು ನೀಡುವ ಬಗೆ ಹಾಗೂ ಅದರ ಗೌರವವನ್ನು ಮನದಟ್ಟು ಮಾಡುತ್ತಾ ,ಶ್ರದ್ಧೆಯಿಂದಲಾದರೂ ,ನಂಬಿಕೆಯಿಲ್ಲದಿದ್ದರೂ, ಭಯದಿಂದಲಾದರೂ,ಜ್ಞಾನಪೂರ್ವಕ 'ವಾದರೂ ಸರಿ ಕರ್ತವ್ಯವೆಂಬ ದೃಷ್ಟಿಯಿಂದ ತಮ್ಮ ಯೋಗ್ಯತಾನುಸಾರವಾಗಿ ದಾನವನ್ನು ಕೊಡಬೇಕೆಂದು ಸಾರಲಾಗಿದೆ. ಹಸಿದವರಿಗೆ ಅನ್ನ, ಬಾಯಾರಿದವರಿಗೆ ನೀರು, ಕಷ್ಟದಲ್ಲಿರುವವರಿಗೆ ಸಹಾಯವು ಶ್ರೇಷ್ಠ ದಾನವಾಗಿದೆ.ಕೊಡುವ ದಾನ ಅತ್ಯಲ್ಪವಾದರೂ ಸತ್ಪಾತ್ರರಿಗೆ ಅಸಹಾಯಕರಿಗೆ ಮಾಡಿದ

ದಾನ ಶ್ರೇಷ್ಠವಾದ ದಾನವೆನಿಸುವುದು. ದಾನ ಮಹತ್ತರವಾದರೂ ಷಡ್ಗುಣ್ಯವರ್ಜಿತವಾದರೆ ಅತ್ಯಲ್ಪ ಫಲದಾಯಕ ಅಥವಾ ವಿಫಲವೇ ಆಗಿ ದುಷ್ಫಲವೇ ದೊರಕುವುದು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,